152

ಮಚ್ಚೆ

(ಸ್ತ್ರೀಯರ ಮತ್ತು ಪುರುಷರ ಮೇಲೆ ಅದರ ಪರಿಣಾಮ)

ಬರೆದವರು:

ವೈದ್ಯಗುರು ಎಂ. ಆರ್. ಭಟ್.

ಮಂಗಳೂರು.

1957.

ಒಂದಾಣೆ ANNA 1 ಮಾಲೆ

ಒಂದಾಣೆ ಮಾಲೆಯಲ್ಲಿ
ತಾ. 31-8-1957 ವರೆಗೆ ಪ್ರಕಟವಾದ ಪುಸ್ತಕಗಳು

೧. ‡ಕೆಪ್ಪಟರಾಯ (ವಿನೋದ ಕಥೆ) ದಿ। ಎಂ. ಎನ್. ಕಾಮತ್.
೨. ನಾರೀಶ್ವರರು (ದ್ವಿ. ಮು.) ಏಕಾಂಕ ಪ್ರಹಸನ ಶ್ರೀ। ಕುಡ್ಪಿ ವಾಸುದೇವ ಶೆಣೈ.
೩. ಕಳ್ಳನಿಗೆ ಸಂಭಾವನೆ (ದ್ವಿತೀಯ ಮುದ್ರಣ) ಶ್ರೀ। ಎಲ್. ಎಸ್. ನಾಯಕ.
೪. ‡ಸದ್ರಿ ಸುಬ್ಬ (ಏಕಾಂಕ ಪ್ರಹಸನ) ದಿ। ಎಂ. ಎನ್ ಕಾಮತ್.
೫. ಅದ್ಭುತ ತ್ಯಾಗ (ದ್ವಿತೀಯ ಮುದ್ರಣ) ವೈದ್ಯಗುರು ಎಂ. ಆರ್. ಭಟ್.
೬. ‡ಚುನಾವಣೆ ಅರ್ಥಾತ್ ಬನಾವಣೆ (ಏಕಾಂಕ ಪ್ರಹಸನ) ಕುಡ್ಪಿ ವಾಸುದೇವ ಶೆಣೈ.
೭. ‡'ಬೀಡಿ ಸೇದಬೇಡಿ' ಮತ್ತು 'ಆ ಮಗು' (ವಿನೋದ ಕಥೆಗಳು) ದಿ। ಎಂ.ಎನ್.
೮. ‡ಇಂಗ್ಲಿಷ್-ಕನ್ನಡ ಅರ್ಥಕೋಶ (ಭಾರತ ಸಂವಿಧಾನದಿಂದ) [ಕಾಮತ್.
೯. ಲಂಚಕ್ಕೆ ಸಂಚಕಾರ (ದ್ವಿತೀಯ ಮುದ್ರಣ) ಡಾ। ಎಸ್. ಪಿ. ಭಟ್.
೧೦. ಟಿಶ್ಯೂ ಔಷಧಿಗಳ ಕೈಪಿಡಿ(ದ್ವಿ. ಮುದ್ರಣ) ಶ್ರೀ। ಪಿ. ಎಸ್. ವೆಂಕಟಕೃಷ್ಣರಾವ್.
೧೧. ಶ್ರೀಕ್ಷೇತ್ರ ಧರ್ಮಸ್ಥಳ (ಐದನೇ ಮುದ್ರಣ).
೧೨. ಜೀವದ ಮೌಲ್ಯ (ದ್ವಿತೀಯ ಮುದ್ರಣ) ಶ್ರೀ। ಎಲ್. ಎಸ್. ನಾಯಕ.
೧೩. ‡ಸತ್ತವನ ಸೇಡು ಮತ್ತು ಇತರ ಕಥೆಗಳು ಡಾ। ವಿ. ಆರ್. ಭಟ್.
೧೪. ‡"ವೆಂಕಟನ ಸಂಕಟ" (ಏಕಾಂಕ ಪ್ರಹಸನ) ಮತ್ತು ಎರಡು ಕಥೆಗಳು
೧೫. ಚಾಬಿಗೆ ಬಾಸಿಂಗ (ದ್ವಿ. ಮು.)ಏಕಾಂಕ ಪ್ರಹಸನ ಶ್ರೀ। ಕುಡ್ಪಿ ವಾಸುದೇವ ಶೆಣೈ.
೧೬. ವೇಣೂರಿನ ಗತವೈಭವ (ದ್ವಿ. ಮುದ್ರಣ) ದಿ। ಪಂಡಿತ ಲೋಕನಾಥ ಶಾಸ್ತ್ರಿಗಳು.
೧೭. ಒಗಟುಗಳು (ದ್ವಿತೀಯ ಮುದ್ರಣ) ಶ್ರೀ। ಟಿ. ಚಂದ್ರರಾಜ ಸೆಟ್ಟಿ.
೧೮. ಜಗಳಗಂಟಿ ಮತ್ತು ಇತರ ಕಥೆಗಳು (ದ್ವಿ.ಮು.) ವೈದ್ಯಗುರು ಎಂ. ಆರ್. ಭಟ್.
೧೯. ರಥೋತ್ಸವ.
೨೦. ‡ಕರಿನಾಯಿ ಮತ್ತು ಮುಪ್ಪು ದಿ। ಎಂ. ಎನ್. ಕಾಮತ್.
೨೧. ಭಾರತದ ಮಹಾನಗರಗಳು (ದ್ವಿ. ಮುದ್ರಣ) ಶ್ರೀ। ಟಿ. ಚಂದ್ರರಾಜ ಸೆಟ್ಟಿ.
೨೨. ತಿರುಕ್ಕುರಲ್ (ದ್ವಿತೀಯ ಮುದ್ರಣ) ಶ್ರೀ। ಡಿ. ಪುಟ್ಟಸ್ವಾಮಿ, ಎಡ್ವೊಕೇಟ್.
೨೩. ಸೂರ್ಯನ ಸಂಸಾರ ಮತ್ತು ಇತರ ಕಥೆಗಳು(ದ್ವಿ.ಮು.) ಶ್ರೀ। ಬಿ. ಶಂಕರ ಭಟ್.
೨೪. ಭಾರತದ ಮಹಾನಗರಗಳು (ದ್ವಿತೀಯ ಮುದ್ರಣ) ಶ್ರೀ। ಟಿ. ಚಂದ್ರರಾಜ ಸೆಟ್ಟಿ.
೨೫. ಧೈರ್ಯ ಮತ್ತು ಇತರ ಸತ್ಯ ಕಥಾನಕಗಳು ಶ್ರೀ। ಎಲ್. ಎಸ್. ನಾಯಕ.
೨೬. ಮಾತಾವತಾರ (ದ್ವಿತೀಯ ಮುದ್ರಣ) ಶ್ರೀ। ಜಿ.ಆರ್.ಪಾಂಡೇಶ್ವರ.
೨೭. ಹಾಸವಿಲಾಸ [ದ್ವಿ.ಮು.] ಶ್ರೀ। ಕುಡ್ಪಿ ವಾಸುದೇವ ಶೆಣೈ.
೨೮. ಸತ್ಯವಂತ ಚಾಬಿ [ದ್ವಿ. ಮು.] ಏಕಾಂಕ ಪ್ರಹಸನ ಶ್ರೀ। ಕುಡ್ಪಿ ವಾಸುದೇವ ಶೆಣೈ.
೨೯. ಜಾಣ್ಮೆಯ ಒಗಟುಗಳು ಡಾ। ಎಸ್. ಪಿ. ಭಟ್.
೩೦. ಜಾತಕ ಕಥೆಗಳು [ದ್ವಿ.ಮು.] ಶ್ರೀ। ಎಂ. ಸುಬ್ರಾಯನ್.
೩೧. ಕಾರ್ಕಳದ ಚರಿತ್ರೆ ಶ್ರೀ। ಡಿ. ಪುಟ್ಟಸ್ವಾಮಿ, ಎಡ್ವೊಕೇಟ್.

(14ನೇ ಪುಟಕ್ಕೆ ಮುಂದುವರಿದಿದೆ.)

ಪ್ರಕಾಶಕರ ಎರಡು ಮಾತು

ಮಚ್ಚೆ (mole or freckle) ಎಂಬುದು ಮನುಷ್ಯದೇಹದ ಮೇಲೆ ಎಲ್ಲಿಯಾದರೂ ಇದ್ದೇ ಇರುತ್ತದೆ. ಕೆಲವರಿಗೆ ದೊಡ್ಡ ಪ್ರಮಾಣದಲ್ಲಿಯೂ ಮತ್ತೆ ಕೆಲವರಿಗೆ ಎಳ್ಳಿನಷ್ಟು ಸಣ್ಣದಾಗಿಯೂ ಇರುವುದು. ಒಂದಾದರೂ ಮಚ್ಚೆಯಿರದವನು ಅತಿ ವಿರಲ.

ಸಾಮುದ್ರಿಕಶಾಸ್ತ್ರವು ವಿಕಾಸಹೊಂದುವಾಗ, ಮಚ್ಚೆಯ ಕುರಿತೂ ಒಂದು ಶಾಸ್ತ್ರವು ರಚಿಸಲ್ಪಟ್ಟಿತು. ಪೂರ್ವಕಾಲದ ಸಂಶೋಧಕರು ಅಥವಾ ವಿಜ್ಞಾನಿಗಳು, ತಾವು ಕಂಡರಿತ ಕೆಲವರನ್ನು ಸೂಕ್ಷ್ಮವಾಗಿ ಪರೀಕ್ಷಿಸಿ, ಇದನ್ನು ನಿರ್ಧರಿಸಿರಬೇಕೆಂಬುದರಲ್ಲಿ ಎರಡಭಿಪ್ರಾಯಗಳಿಲ್ಲ. ಆದರೆ, ಮಚ್ಚೆಗಳೆಂಬುದು ಗ್ರಹಗಳಂತೆ, ನಕ್ಷತ್ರಗಳಂತೆ ಇರುವಂಥವಲ್ಲ. ಅವು ದೈವಿಕವಲ್ಲ; ದೈಹಿಕವಾದುದರಿಂದ ಕಾಲವು ಕ್ರಮಿಸಿದಂತೆ, ಯಾವುದಾದರೂ ಜೀವನಕ್ರಮ, ಆಹಾರಕ್ರಮ--ಇತ್ಯಾದಿಗಳಿಂದ ಮಚ್ಚೆಗಳು ಎದ್ದು ತೋರುವುದೂ ಅವುಗಳ ಫಲಾಫಲಗಳು ಬದಲಾಗುವುದೂ ಸಾಧ್ಯವಿದೆ.

"ಮಚ್ಚೆ ಮತ್ತು ಸ್ತ್ರೀಯರ ಹಾಗೂ ಪುರುಷರ ಮೇಲೆ ಅದರ ಪರಿಣಾಮ" – ಎಂಬೀ ಸಂಗ್ರಹವನ್ನು ಪ್ರತಿಯೊಬ್ಬನೂ ಅಕ್ಷರಶಃ ನಂಬಬಹುದು, ಮತ್ತು ಈ ಮಚ್ಚೆಗಳ ಸ್ಥಾನದಿಂದ, ಗುಣಸ್ವಭಾವ—ಭವಿಷ್ಯಗಳನ್ನು ನಿರ್ಧರಿಸಬಹುದು–ಅಥವಾ ನಿರ್ಧರಿಸಬೇಕು–ಎಂದು ನಾವಿದನ್ನು ಪ್ರಕಟಿಸಿಲ್ಲ. ಈ ಹಳೇ ಶಾಸ್ತ್ರವೊಂದನ್ನು, ಕೇವಲ ತಿಳುವಳಿಕೆಗಾಗಿ ಕೊಟ್ಟಿರುವೆವು.

ಇದನ್ನು ಸಂಗ್ರಹಿಸಿಕೊಟ್ಟ ವೈದ್ಯಗುರು ಎಂ. ಆರ್. ಭಟ್‌ರವರು ಪ್ರಸಿದ್ಧ ಜೋಯಿಸರು; ವೈದ್ಯರು; ಹಲವು ಸಂಸ್ಕೃತ ಗ್ರಂಥಗಳನ್ನು ಅಧ್ಯಯನಮಾಡಿರುವ ವಿದ್ವಾಂಸರು. ಅನೇಕ ಗ್ರಂಥಗಳನ್ನೂ ಬರೆದು ಪ್ರಕಟಿಸಿ, ಕನ್ನಡಿಗರಿಗೆ ಸುಪರಿಚಿತರು. ಇದೊಂದು ಮನೋರಂಜಕ ವಿಷಯವೆಂದು ಈ ಲೇಖನವನ್ನು ಕೊಟ್ಟಿರುತ್ತಾರೆ. ಇದು, ಓದುಗರನ್ನು ಅನುರಂಜಿಸುವುದೆಂದಿಷ್ಟೆ ಹೇಳುವೆವು.

ಕುಡ್ಪಿ ವಾಸುದೇವ ಶೆಣೈ.

ಮಚ್ಚೆ: ಪರಿಣಾಮಗಳು

೧. ಸ್ತ್ರೀಯರ ಮೇಲೆ ಮಚ್ಚೆಯ ಪರಿಣಾಮ

ಹಣೆಯ ಅಥವಾ ಕಣ್ತಲೆಯ ಎಡಭಾಗದಲ್ಲಿ ಮಚ್ಚೆಯಿದ್ದರೆ, ಸ್ಥಾನ ಮಾನಗಳಿಗನುಸಾರ ಅನಿರೀಕ್ಷಿತ ಧನ ಹಾಗೂ ಮಾನಲಾಭ; ಮಚ್ಚೆಯು ಕೆಂಪಾಗಿದ್ದರೆ ೩೦ ವರ್ಷ ಪ್ರಾಯದ ನಂತರ ಸ್ತ್ರೀಗೆ ಅತ್ಯಂತ ಸುಖಪ್ರಾಪ್ತಿ, ನೀಲ ಅಥವಾ ಕಪ್ಪಾಗಿದ್ದರೆ. ೪೦ ವರ್ಷ ವಯಸ್ಸಿನ ತರುವಾಯ ಧನಲಾಭ.

ಎಡ ಹುಬ್ಬಿನ ಮೇಲೆ ಮಚ್ಚೆಯಿದ್ದರೆ, ಎಳೆವಯಸ್ಸಿನಲ್ಲಿ ಮದುವೆ. ಹಾಗೂ ಮದುವೆಯಾದ ಗಂಡನು ಅತ್ಯಂತ ಸದ್ಗುಣಿ ಹಾಗೂ ಸೌಭಾಗ್ಯ ಸಂಪನ್ನನಾಗುವನು.

ಹಣೆ, ಕಣ್ತಲೆ ಮತ್ತು ಹುಬ್ಬು — ಇವುಗಳ ಬಲಭಾಗದಲ್ಲಿದ್ದರೆ, ಸ್ತ್ರೀಯು ದುಃಖಿತೆ ಹಾಗೂ ಹತಭಾಗ್ಯಳಾಗುವಳು. ಯಾವುದೇ ಕಣ್ಣಿನ ಹೊರಮೂಲೆಯಲ್ಲಿ ಮಚ್ಚೆಯಿದ್ದರೆ, ಸ್ತ್ರೀಯು ಶಾಂತ, ಸ್ಥಿರ ಹಾಗೂ ಧೀರಳಾಗುವಳು ಮತ್ತು ಉಗ್ರ ಹಾಗೂ ಅಕಾಲಮರಣಕ್ಕೆ ಒಳಗಾಗುವಳು.

ಯಾವುದೇ ಕೆನ್ನೆಯ ಮೇಲೆ ಮಚ್ಚೆಯಿದ್ದರೆ, ಅತ್ಯಂತ ಧನಿಕಳೂ ಅಲ್ಲ; ಅತ್ಯಂತ ದರಿದ್ರಳೂ ಅಲ್ಲ; ಮಧ್ಯಮವರ್ಗದ ಕೆಳಭಾಗದಲ್ಲಿ ದುಡಿದು ಜೀವಿಸಿ ಬಾಳುವಳು.

ಮೂಗಿನ ಮೇಲೆ ಮಚ್ಚೆಯಿದ್ದರೆ, ಸಕಲ ಕಾರ್ಯಗಳಲ್ಲಿ ದಕ್ಷಳು; ಮತ್ತು ಜಯಶಾಲಿನಿಯಾಗಿ ಮೆರೆದು ಜೀವಿಸುವಳು.

ಯಾವದೇ ತುಟಿಯ ಮೇಲೆ ಮಚ್ಚೆಯಿದ್ದರೆ, ಕೋಮಲ ಪದಾರ್ಥ ಗಳಲ್ಲಿ ಆಸಕ್ತಳು; ಹಾಗೂ ವಿಷಯಸುಖನಿರತಳಾಗಿ ಜೀವಿಸಿ, ಜಯಶಾಲಿನಿ ಯಾಗುವಳು,

ಗದ್ದ (ಚಿಬುಕ)ದ ಮೇಲೆ ಮಚ್ಚೆಯಿದ್ದರೆ, ಸ್ತ್ರೀಯು ಅಭ್ಯುದಯ ಸಂಪನ್ನಳಾಗಿ, ಗಣ್ಯತೆಹೊಂದುವಳು.

ಕೊರಳಿನ ಪಕ್ಕದಲ್ಲಿ ಮಚ್ಚೆಯಿರುವುದರಿಂದ ಅತ್ಯಂತ ಶಾರೀರಿಕ ಅಥವಾ ಆರ್ಥಿಕ ಸಂಕಷ್ಟಗಳಿಂದ ವಿಮೋಚನೆಹೊಂದಿದ ನಂತರ ಅನಿರೀಕ್ಷಿತ

ಧನಲಾಭ ಹಾಗೂ ಭೂಮಿಲಾಭ; ಸ್ಥಾನಮಾನ ಹೊಂದಿ, ಯಶಸ್ವಿನಿಯಾಗುವಳು.

ಕೊರಳಿನ ಮೇಲೆ ಹಾಗೂ ಮಧ್ಯಭಾಗದಲ್ಲಿ ಮಚ್ಚೆಯಿದ್ದರೆ ವಿವಾಹದಿಂದ ಧನಿಕಳಾಗುವಳು.

ಎಡ ಮೊಲೆಯ ಮೇಲೆ ಮಚ್ಚವಿದ್ದರೆ, ಕಟಕ್ಕನೆ ವಿಪತ್ತಿ ಹಾಗೂ ಸಂಕಷ್ಟಗಳಿಗೆ ಒಳಗಾಗಿ ಸುಖಸೌಕರ್ಯಗಳನ್ನು ಕಳಕೊಂಡು, ಅತ್ಯಂತ ದುಃಖ ಅನುಭವಿಸುವಳು; ಅದಲ್ಲದೆ, ಅನಿರೀಕ್ಷಿತ ಆಘಾತಪ್ರತ್ಯಾಘಾತ ಅಧೀನಳಾಗುವಳು; ಬಹುಪುತ್ರರ ಮಾತೆಯಾಗುವಳು.

ಬಲಮೊಲೆಯ ಮೇಲಿರುವ ಮಚ್ಚೆಯು ಕಾರ್ಯಗಳಲ್ಲಿ ಜಯ ಮತ್ತು ಸುಂದರ ಸ್ವಭಾವವನ್ನು ಸೂಚಿಸುತ್ತದೆ.

ಎದೆಯ ಮೇಲೆ ಚಕ್ರಾಕಾರದ ಹಾಗೂ ಚಿಕ್ಕದಾದ ಮಚ್ಚೆಯು ಮಧ್ಯಮ ಆರೋಗ್ಯ ಹಾಗೂ ಮಧ್ಯಮ ಭಾಗ್ಯಸೂಚಕವಾಗಿದೆ.

ಬಲ ಮೊಲೆಯ ಕೆಳಗೆ ಹಾಗೂ ಹೃದಯಕ್ಕೆ ನೇರವಾಗಿ ಮಚ್ಚೆಯಿದ್ದರೆ, ಸ್ತ್ರೀಯು ಪ್ರೇಮಲ ಸ್ವಭಾವದವಳು, ಚಂಚಲಚಿತ್ತಳು; ಪ್ರಯಾಣ ಪ್ರೇಮದವಳು ಮತ್ತು ನಡತೆಯಲ್ಲಿ ತೇಜೋಮಯಳಾಗಿರುವಳು.

ಪಕ್ಕೆಲುಬುಗಳ ಎಡಭಾಗದಲ್ಲಿ ಮಚ್ಚೆಯಿದ್ದರೆ, ಸ್ತ್ರೀಯುಳು ಸೋಮಾರಿಯಾಗಿ, ಸೂಕ್ಷ್ಮ ವಿಚಾರಗ್ರಹಣದಲ್ಲಿ ಅಶಕ್ತಳಾಗಿ, ಸಂಕಷ್ಟಗಳನ್ನು ಅನುಭವಿಸುವಳು.

ನಡುಹೊಟ್ಟೆಯ ಮೇಲೆ, ಮಚ್ಚೆ ಅಥವಾ ಅನ್ಯ ತಿಲಕವಿದ್ದರೆ, ಸ್ತ್ರೀಯು ಸಾಹಸಿಯಾಗದೆ, ಅತ್ಯಧಿಕ ಆಹಾರ ತಿನ್ನುವವಳು; ಸಕಲ ಕಾರ್ಯಗಳಲ್ಲಿಯೂ ಸ್ವಾರ್ಥಿಯಾಗಿ ವರ್ತಿಸುವಳು; ಪರರಿಗೆ ಒಳ್ಳೆದನ್ನು ಮಾಡದೆ, ಹಾಗೂ ಸುಂದರ ವಸ್ತ್ರಾಲಂಕಾರಗಳನ್ನು ಧರಿಸದೆ, ಜೀವಿಸಿರುವಳು.

ಎಡ ತೊಡೆಯ ಮೇಲೆ ಮಚ್ಚೆಯಿದ್ದರೆ, ಅತ್ಯಂತ ಶಾರೀರಿಕ ಸಂಪತ್ತಿಯಿಂದ ಮೆರೆಯುವಳು. ಸೌಭಾಗ್ಯಯುಕ್ತ ಹಾಗೂ ಧನಿಕಳಾಗುವಳು; ಶ್ರೀಮಂತರ ಹಾಗೂ ಶ್ರೇಷ್ಠರ ಸಮ್ಮುಖದಲ್ಲಿ ಓರ್ವ ಶ್ರೇಷ್ಠ ವರನನ್ನು ವರಿಸುವಳು.

ಬಲತೊಡೆಯ ಮೇಲಿರುವ ಮಚ್ಚೆಯು ಬಡತನದಲ್ಲಿ ಬಳಲಿಬೆಂಡಾಗಿ, ಮಿತ್ರರಿಲ್ಲದೆ ಶತ್ರುಗಳ ಅನ್ಯಾಯ ಹಾಗೂ ಶತ್ರುತ್ವದಿಂದ ಪೀಡಿತಳಾಗಿರುವ ಸ್ತ್ರೀಯೆಂದು ಸೂಚಿಸುತ್ತದೆ.

ಬಲ ಮೊಣಕಾಲಿನ ಮೇಲೆ ಮಚ್ಚೆಯಿದ್ದರೆ, ಸ್ತ್ರೀಯು ದುಡುಕಿನವಳು; ವಿವೇಕಶೂನ್ಯಳು ಹಾಗೂ ಮುಂಗೋಪಿಯಾಗುವಳು; ಆದರೆ, ಉತ್ತರ ವಯಸ್ಸಿನಲ್ಲಿ ಶಾಂತಚಿತ್ತಳು, ವಿನಯಯುಕ್ತಳು, ಪ್ರಾಮಾಣಿಕಳು ಮತ್ತು ಸದ್ವರ್ತನೆಯುವಳಾಗುತ್ತಾಳೆ.

ಯಾವುದೇ ಹರಡು ಅಥವಾ ಗುಲ್ಫದ ಮೇಲೆ ಮುಂಭಾಗದಿಂದ ಮಚ್ಚೆಯಿದ್ದರೆ ವಿವೇಕಶೂನ್ಯಳು; ಹಾಗೂ ಭವಿಷ್ಯದ ಕುರಿತು ಉದಾಸೀನಳಾಗುವಳು.

ಯಾವುದೇ ಹರಡಿನ ಹಿಂಭಾಗದಲ್ಲಿ ಮಚ್ಚೆಯಿದ್ದರೆ, ಸ್ತ್ರೀಯು ಪುರುಷಸ್ವಭಾವದವಳು; ವಸ್ತ್ರಪ್ರಿಯ ಹಾಗೂ ಸರಳ ಆಹಾರಪ್ರಿಯಳು.

ಎಡ ಮೊಣಕಾಲಿನ ಮೇಲೆ ಮಚ್ಚೆಯಿರುವುದರಿಂದ, ಮನಸ್ಸಿಗೆ ಸಂಪೂರ್ಣ ಒಪ್ಪುವ ವರನನ್ನು ಮದುವೆಯಾಗುವಳು; ಇಡೀ ಜೀವಮಾನದಲ್ಲಿ ನಿರಾಶೆಯು ಬರಲಾರದು.

ಯಾವುದೇ ಪಾದದ ಮೇಲೆ ಮಚ್ಚೆಯಿದ್ದರೆ, ವಿವೇಕಯುತ ಹಾಗೂ ಜಾಣಳಾಗುವಳು; ದೂರದರ್ಶಿನಿ ಹಾಗೂ ಗೌಪ್ಯದವಳು. ಎಡ ಭುಜದ ಮೇಲೆ ಮಚ್ಚೆ ಇದ್ದರೆ ಚತುರೆ ಹಾಗೂ ಜಾಣಳು; ದೂರದರ್ಶಿನಿ ಹಾಗೂ ಗೌಪ್ಯದವಳು.

ಬಲ ಭುಜದ ಮೇಲೆ ಮಚ್ಚೆಯಿದ್ದರೆ, ಜಗಳಗಂಟಿ ಹಾಗೂ ಅನ್ಯರ ಅಧೀನದಲ್ಲಿ ಇರಲಾರಳು.

ಎಡ ತೋಳಿನ ಮೇಲೆ ಮಚ್ಚೆಯಿದ್ದರೆ, ಉತ್ಸಾಹಯುತಳು, ಧೈರ್ಯಶಾಲಿನೀ ಹಾಗೂ ನಿರ್ಭೀತಳು.

ಬಲ ತೋಳಿನ ಮೇಲೆ ಮಚ್ಚೆಯಿರುವುದರಿಂದ, ಸ್ಥಿರಚಿತ್ತಳು ಹಾಗೂ ಯುದ್ಧದಲ್ಲಿ ಜಯಶಾಲಿನಿಯಾಗುವಳು.

ಯಾವುದೇ ಮೊಣಕೈಯ ಮೇಲಿದ್ದರೆ, ಶಾಂತಿರಹಿತ, ಚಂಚಲಚಿತ್ತ, ಶೀಘ್ರಕೋಪಿ ಹಾಗೂ ಸ್ವಜನರಿಂದ ಅಸಂತುಷ್ಟಳು.

ನೊಣಕ್ಕೆ ಮತ್ತು ಮಣಿಕಟ್ಟಿನ ನಡುವೆ ಮಚ್ಚೆಯಿದ್ದರೆ ಅನೇಕ ಸಂಕಷ್ಟಗಳನ್ನು ಅನುಭವಿಸಿದ ನಂತರವೆ ಧನಿಕ ಹಾಗೂ ಕೀರ್ತಿವಂತಳಾಗುವಳು. ಮಣಿಕಟ್ಟಿನ ಮೇಲೆ ಅಥವಾ ಮಣಿಕಟ್ಟು ಮತ್ತು ಕೈಬೆರಳುಗಳ ಕೂಡಿಗಳ ನಡುವೆ ಮಚ್ಚೆಯಿದ್ದರೆ, ಚತುರೆ, ವಿಶ್ವಾಸಪಾತ್ರಳು ಹಾಗೂ ಶ್ರದ್ಧಾವಂತಳು ಆಗುವಳು; ಅಂಥವಳು ಗೆಳತಿಯರನ್ನು ಅತ್ಯಂತವಾಗಿ ಪ್ರೀತಿಸುವಳು.

ಭುಜದಿಂದ ಸೊಂಟದ ವರೆಗೆ ನೇರಾಗಿ ಮಚ್ಚೆಯಿದ್ದರೆ ಅತ್ಯಂತ ಹಾನಿಕಾರಕ ಹಾಗೂ ತುಂಟಳಾಗುವಳು.

ಹೊಟ್ಟೆಯ ಮೇಲೆ ಮಚ್ಚೆಯಿದ್ದರೆ ಬಹುಹೆಚ್ಚು ಆಹಾರ ತಿನ್ನುವಳು.

ಹೊಟ್ಟೆಯ ಕೆಳಭಾಗದಲ್ಲಿದ್ದರೆ ದುರ್ಬಲ ಹಾಗೂ ದೋಷಯುಕ್ತಳಾಗುವಳು.

ಮುಂಡಿಯ ಮೇಲೆ ಮಚ್ಚೆಯಿದ್ದರೆ ಸದಾ ಅಡ್ಡಾಡುವಳು ಹಾಗೂ ಪ್ರಯಾಣಿಕಳು.

ಗಂಟಲಿನ ಮೇಲ್ಭಾಗದಲ್ಲಿ ಮಚ್ಚೆಯಿದ್ದರೆ ಧನಿಕಳಾಗುವಳು.

ಹಣೆಯ ಮಧ್ಯಭಾಗದಲ್ಲಿ ಅಥವಾ ತಲೆಕೂದಲಿನ ಹತ್ತಿರ ಹಣೆಯ ಮಧ್ಯದಲ್ಲಿ ಮಚ್ಚೆಯಿದ್ದರೆ—ಸ್ತ್ರೀಯು ಅನ್ಯರೊಡನೆ ಶತ್ರುತ್ವ ಕಟ್ಟಿಕೊಂಡು ಕ್ರೂರ ಹಾಗೂ ಕಠೋರ ತಾಕ್ ಸಂಪತ್ತಿನವಳಾಗುವಳು; ಮಚ್ಚೆಯು ಕೆಂಪಾಗಿದ್ದರೆ ಲೋಕಪ್ರಿಯಳಾಗುವಳು. ಕುಂಕುಮ ಬಣ್ಣದ್ದಾದರೆ ಉಗ್ರ ಹಾಗೂ ಪ್ರಚಂಡ ಸ್ವಭಾವದವಳು; ಕಪ್ಪಾಗಿದ್ದರೆ ನಿಷ್ಪ್ರಯೋಜಕ ಹಾಗೂ ಪ್ರಮಾಣ ರಹಿತಳು; ನಕ್ಷೋಲಿಯಂತೆ ಮಚ್ಚೆಯು ಕಾಣಿಸಿದರೆ, ಸೌಭಾಗ್ಯಸಂಪನ್ನಳಾಗುವಳು.

ಹಣೆಯ ಮಧ್ಯದಲ್ಲಿದ್ದು ಸ್ವಲ್ಪ ಎಡ ಭಾಗದಲ್ಲಿ ಮಚ್ಚೆಯಿದ್ದರೆ, ಶ್ರೀಮಂತರ ಹಾಗೂ ಧನಿಕರ ಗೆಳೆತನದಿಂದ ಲಾಭಹೊಂದಿ, ಜೀವಿಸಿ ಮೆರೆಯುವವಳು; ಮಾನನೀಯ ಮುಖ ವೈಖರಿಯುಳ್ಳವಳು; ಅತ್ಯಂತ ಗಣ್ಯತೆ ಪಡೆದವಳು ಹಾಗೂ ಲೋಕಕಲ್ಯಾಣಯುತಳಾಗಿ ಪೂಜಿತಳು; ಕಪ್ಪಾಗಿದ್ದರೆ ಮಹಾಪುರುಷ ಅಥವಾ ಸ್ತ್ರೀಯರ ಅಸಂತೋಷಕ್ಕೆ ಒಳಗಾಗಿ–ದುಃಖಿತಳಾಗುವಳು; ನರೋಲಿಯಂತಿದ್ದರೆ, ಸೌಭಾಗ್ಯವರ್ಧಕವಾಗಿದೆ.

ಹಣೆಯ ಬಲಭಾಗದಲ್ಲಿ ಹಾಗೂ ಕೂದಲಿನ ಹತ್ತಿರ ಮಚ್ಚೆಯಿದ್ದರೆ ಮೇಲಾಧಿಕಾರಿಗಳಿಂದ ಪೀಡಿತಳಾಗಿ, ಫೌಜದಾರಿ ಫಿರ್ಯಾದಿಗೆ ಒಳಗಾಗಿ,

ತಪ್ಪಿತಸ್ಥಳಾಗಿ ಬಂಧಿತಳಾಗುವಳು; ಜೇನಿನ ಬಣ್ಣದ್ದಾದರೆ ಪಿತ್ರಾರ್ಜಿತ ಸೊತ್ತನ್ನೆಲ್ಲಾ ಹಾಗೂ ಸಕಲ ಸಂಪತ್ತಿಯನ್ನು ದುಂದುಗಾರಿಕೆಯಿಂದ ಹಾಳು ಮಾಡುವವಳು; ಕಪ್ಪಾಗಿದ್ದರೆ ಮಹಾಪುರುಷರ ಅಥವಾ ಸ್ತ್ರೀಯರ ಕೋಪಕ್ಕೆ ಒಳಗಾಗಿ ದುಃಖಿತಳಾಗುವಳು.

ಬಲಕಣ್ತಲೆಯ (ಗಂಡಸ್ಥಲದ) ಮೇಲೆ ಮಚ್ಚೆಯಿದ್ದರೆ, ಹಾಸ್ಯರಸ ಪ್ರಧಾನಳು; ಹಾಗೂ ಬುದ್ಧಿವಂತಳು, ಕಪ್ಪಾಗಿದ್ದರೆ ಸುಳ್ಳುಗಾರಳೆಂದು ಜನರಿಂದ ಕರೆಯಲ್ಪಡುವಳು. ನರೋಲಿಯಂತಿದ್ದರೆ, ಭಾಗ್ಯವು ದುರ್ಬಲವಾಗುವುದು.

ಎಡ ಕಣ್ತಲೆಯ ಮೇಲೆ ಮಚ್ಚೆಯಿದ್ದರೆ ಹಾಗೂ ತಲೆಯ ಬದಿಯಲ್ಲಿದ್ದರೆ, ದೀರ್ಘಾಯು ಹಾಗೂ ಸೌಭಾಗ್ಯಯುಕ್ತಳಾಗುವಳು; ಕಂದು ಅಥವಾ ಕೆಂಪು ಬಣ್ಣದ್ದಾದರೆ ಕಾರ್ಯಸಾಧಕಳು.

ಎಡ ಕಣ್ತಲೆಯ ಮೇಲೆ ಕುತ್ತಿಗೆಯ ಕಡೆಗೆ ಬಗ್ಗಿಕೊಂಡಿದ್ದ ಮಚ್ಚೆಯು ಅದ್ವಿತೀಯ ಪ್ರತಿಷ್ಠೆ, ಅತ್ಯಧಿಕ ಧನ ಹಾಗೂ ದೀರ್ಘಾಯುಷ್ಯವುಳ್ಳವಳೆಂದು ಸೂಚಿಸುತ್ತದೆ. ಮಚ್ಚೆಯು ಜೇನು ಅಥವಾ ಕೆಂಬಣ್ಣದ್ದಾದರೆ, ಅತ್ಯಂತ ಭಾಗ್ಯಶಾಲಿನಿಯಾಗುವಳು. ಮಚ್ಚೆಯು ಕರ್ರಗಿದ್ದರೆ, ತಾಪತ್ರಯ ಸೂಚಕವಾಗಿದೆ. ನರೋಲಿಯಂತಿದ್ದ ಮಚ್ಚೆಯಿಂದ ಹೆಚ್ಚಿನ ವಿಷಯಸುಖ, ಸೌಕರ್ಯ ಮತ್ತು ಸೌಲಭ್ಯಗಳು ಲಭಿಸುವುವು. ಕಣ್ತಲೆಯ ಬಲಬದಿಯ ಮಚ್ಚೆಯು ಕಣ್ಣಿಗಿಂತ ಸ್ವಲ್ಪ ಮೇಲ್ಭಾಗದಲ್ಲಿದ್ದರೆ ರೋಗಪೀಡಿತಳು. ಅದು ಕಪ್ಪಾಗಿದ್ದರೆ, ಅಲ್ಪಾಯುರ್ದಾಯವು ಸೂಚಿತವಾಗಿದೆ; ನರೋಲಿಯಂತಿದ್ದರೆ, ಅತ್ಯಂತ ಸುಖಮಯವಾಗಿದೆ.

ತುಟಿಯ ಮೇಲೆ ಯಾವುದೇ ಭಾಗದಲ್ಲಿ ಮಚ್ಚೆಯಿದ್ದರೆ ಅತ್ಯಂತ ಧನಿಕಳು. ಯಾವುದೇ ಕಿವಿಯ ಮೇಲೆ ಮಚ್ಚೆಯಿರುವುದರಿಂದ ಧನಿಕ ಹಾಗೂ ಮಾನವಂತಳು.

ಕುತ್ತಿಗೆಯ ಮೇಲೆ ಮಚ್ಚೆಯಿದ್ದರೆ, ಧನಿಕಳಾಗುವಳು; ಅಂಥವಳ ಪತಿಯು ಸಚ್ಚರಿತ್ರದವನು.

ಕೊರಳಿನ ಮೇಲೆ ಮಚ್ಚೆಯಿದ್ದರೆ ಧನಸಂಪನ್ನಳು ಹಾಗೂ ಸಂಭ್ರಮದಿಂದ ವಿವಾಹವಾಗುವಳು.

ಯಾವುದೇ ಅಂಗೈ ಮೇಲೆ ಮಚ್ಚೆಯಿದ್ದರೆ, ಅತ್ಯಂತ ಅಭ್ಯುದಯ ಹಾಗೂ ರೋಗರಹಿತ ಪುತ್ರ-ಪುತ್ರಿಯರಿರುವರು.

ಎಡ ಮೊಲೆಯ ಮೇಲೆ ಮಚ್ಚೆಯಿರುವುದರಿಂದ ಬಡತನ.

ಬಲ ಮೊಲೆಯ ಮೇಲಿದ್ದರೆ ಸೌಭಾಗ್ಯ ಹಾಗೂ ಶ್ರೀಮಂತಿಕೆ.

ಉದರದ ಬಲಭಾಗದಲ್ಲಿ ಮಚ್ಚೆಯಿದ್ದರೆ ವಿಷಯಾಸಕ್ತಳು ಹಾಗೂ ವಿಲಾಸಪ್ರಿಯಳು.

ಬಲ ಭುಜದ ಮೇಲೆ ಮಚ್ಚೆಯಿದ್ದರೆ (ತೋಳಿನ ಹತ್ತಿರ) ಜಗಳಗಂಟಿ ಳಾಗುವಳು.

ಎಡ ಕಿವಿಯ ಕೆಳಭಾಗದಲ್ಲಿ ಮಚ್ಚೆಯಿದ್ದರೆ ನೀರಿನಲ್ಲಿ ಮುಳುಗಿ ಸಾಯುವಳು.

ನಾಸ ರಂಧ್ರದ ಕೆಳಭಾಗದಲ್ಲಿ ಮಚ್ಚೆಯಿದ್ದರೆ ವಿವಾಹದ ನಂತರ ಭಾಗ್ಯಶಾಲಿನಿ ಹಾಗೂ ಭಾಗ್ಯಸಂಪನ್ನಳು.

ಹೊಟ್ಟೆಯ ಬಲಬದಿಯಲ್ಲಿ ಮಚ್ಚೆಯಿರುವುದರಿಂದ ಸದಾ ದುಃಖಿತಳು ಹಾಗೂ ಪೀಡಿತಳು. ಎಡ ಪಾದದ ಮೇಲೆ ಮಚ್ಚೆಯಿದ್ದರೆ ಬುದ್ಧಿವಂತಳು.

ಬಲ ಪಾದದ ಮೇಲೆ ಮಚ್ಚೆಯಿದ್ದರೆ ಅವಿಚಾರ ಕಾರ್ಯಗಳಿಂದ ಅಪಾಯಕಾರಕಳು ಆಗುವಳು.

ಯಾವುದೇ ಹುಬ್ಬಿನ ಮೇಲೆ ಮಚ್ಚೆಯಿದ್ದರೆ ಶಟಕ್ಕನೆ ಮದುವೆಯಾಗಿ ಸುಖೀ ದಾಂಪತ್ಯ ನಡೆಸುವಳು.

ಬಲ ಕಂಕುಳಲ್ಲಿ ಮಚ್ಚೆಯಿದ್ದರೆ ಅಕಾಲಮರಣವಶಳಾಗುವಳು. ಎಡ ಕಂಕುಳಲ್ಲಿ ಮಚ್ಚೆಯಿದ್ದರೆ ಸುಖದ ಜೀವನಾಶ.

ಕೊರಳಿನ ಎರಡು ಬದಿಗಳಲ್ಲಿಯೂ ಮಚ್ಚೆಗಳಿದ್ದರೆ ಅಕಾಲಮರಣ ಹಾಗೂ ಅನೇಕ ಆಕಸ್ಮಿಕ ಅಪಾಯಗಳು ಸಂಭವಿಸುವುವು.

ಎದೆಯ ಅಥವಾ ಮೊಲೆಯ ಸರಿ ಮಧ್ಯಭಾಗದಲ್ಲಿ ಮಚ್ಚೆಯಿದ್ದರೆ ಹಾಗೂ ಅದರ ಮೇಲೆ ಒಂದು ಕಪ್ಪು ಕೂದಲು ಇದ್ದರೆ, ಮಹಾಕವಿತೆ ಗಳನ್ನು ಸೃಜಿಸುವಳು.

ಎಡ ಕಣ್ಣಿನ ಹಾಗೂ ನಡುವೆ ಮಚ್ಚೆಯಿದ್ದರೆ, ಭೀಕರಳಾದರೂ ಉಚ್ಚಶೀಲದವಳಾಗುವಳು. ಬಲ ಕಣ್ಣಿನ ಕೆಳಗೆ ಹಾಗೂ ನಡುವೆ ಮಚ್ಚೆ ಯಿದ್ದರೆ, ಸುಂದರಿಯಾದರೂ, ನೀಚಶೀಲದವಳಾಗುವಳು.

ಮಣಿಕಟ್ಟಿನ ಮೇಲೆ ಅಥವಾ ಮಣಿಕಟ್ಟಿನಿಂದ ಬೆರಳು ತುದಿಗಳ ತನಕ, ಮಚ್ಚೆಯಿದ್ದರೆ, ಪ್ರತಿಭಾಶಾಲಿನಿ ಹಾಗೂ ಅತ್ಯಂತ ವಿದ್ಯಾಸಂಪನ್ನಳಾಗುವಳು.

ಮೊಣಕೈಯಿಂದ ಮಣಿಕಟ್ಟಿನ ಪರ್ಯಂತ ಹೆಚ್ಚು ಮಚ್ಚೆಗಳಿದ್ದರೆ, ಮಧ್ಯವಯಸ್ಸಿನಲ್ಲಿ ಹಲವು ತಾಪತ್ರಯಗಳಿಂದ ಬಳಲುವಳು, ಅನಂತರ ಸುಖ, ಧನ, ಹಾಗೂ ಭಾಗ್ಯಯುಕ್ತಳಾಗುವಳು.

ಚಿಬುಕದ (ಕದಪಿನ) ಬದಿಯಲ್ಲಿ ಮಚ್ಚೆಯಿದ್ದರೆ ಸೌಜನ್ಯಯುಕ್ತಳು; ಪರಮೋತ್ಸಾಹಯುಕ್ತಳು; ಜೀವಮಾನದಲ್ಲಿ ಜಯಶಾಲಿನಿಯಾಗಿ, ಗೆಳತಿಯರಿಂದೊಡಗೂಡಿ ಮೆರೆಯುವಳು.

೨. ಪುರುಷರ ಮೇಲೆ ಮಚ್ಚೆಯ ಪರಿಣಾಮ

ಹಣೆಯ ಅಥವಾ ಕಣ್ತಲೆಯ ಬಲಭಾಗದಲ್ಲಿ ಮಚ್ಚೆಯಿದ್ದರೆ ಸ್ಥಾನಮಾನಕ್ಕನುಸಾರ ಅನಿರೀಕ್ಷಿತ ಧನ ಹಾಗೂ ಮಾನಲಾಭ; ಮಚ್ಚೆಯು ಕೆಂಪಗಿರದಿದ್ದರೆ ೩೦ ವರ್ಷ ಪ್ರಾಯದ ನಂತರ ಅತ್ಯಂತ ಸುಖಪ್ರಾಪ್ತಿ, ನೀಲ ಅಥವಾ ಕಪ್ಪಗಿದ್ದರೆ ೪೦ ವರ್ಷ ವಯಸ್ಸಿನ ನಂತರ ಧನಲಾಭ.

ಬಲ ಹುಬ್ಬಿನ ಮೇಲೆ ಮಚ್ಚೆಯಿದ್ದರೆ ಎಳೆವಯಸ್ಸಿನಲ್ಲಿ ಮದುವೆ ಹಾಗೂ ಮದುವೆ ಆದ ಹೆಂಡತಿಯು ಅತ್ಯಂತ ಗುಣವತಿ ಹಾಗೂ ಸೌಭಾಗ್ಯಸಂಪನ್ನಳಾಗುವಳು.

ಮೇಲಿನ ಮೂರರ (ಹಣೆ, ಕಣ್ತಲೆ ಮತ್ತು ಹುಬ್ಬು) ಎಡದಲ್ಲಿದ್ದರೆ ಪುರುಷನು ದುಃಖಿತನಾಗಿ ಹತಭಾಗ್ಯನಾಗುವನು.

ಯಾವುದೇ ಕಣ್ಣಿನ ಹೊರಮೂಲೆಯಲ್ಲಿ ಮಚ್ಚೆಯಿದ್ದರೆ ಪುರುಷನು ಶಾಂತ, ಸ್ಥಿರ ಹಾಗೂ ಧೀರನಾಗುವನು; ಮತ್ತು ಉಗ್ರ ಹಾಗೂ ಅಕಾಲ ಮರಣಕ್ಕೆ ಒಳಗಾಗುವನು.

ಯಾವುದೇ ಕೆನ್ನೆಯ ಮೇಲೆ ಮಚ್ಚೆಯಿದ್ದರೆ ಅತ್ಯಂತ ಧನಿಕನಾಗದೆ ಹಾಗೂ ಅತ್ಯಂತ ದರಿದ್ರನಾಗದೆ ಮಧ್ಯಮ ತರಗತಿಯ ಕೆಳಭಾಗದಲ್ಲಿ ಯಾತನೆಯಿಂದ ಜೀವಿಸಿ ಬಾಳುವನು.

ಮೂಗಿನ ಮೇಲೆ ಮಚ್ಚೆಯಿದ್ದರೆ, ಸಕಲ ಕಾರ್ಯಗಳಲ್ಲಿ ದಕ್ಷ ಹಾಗೂ ಜಯಶಾಲಿಯಾಗಿ ಮೆರೆದು ಜೀವಿಸುವನು.

ಮೇಲಿನ ಅಥವಾ ಕೆಳ ತುಟಿಯ ಮೇಲೆ ಮಚ್ಚೆಯಿದ್ದರೆ, ಕೋಮಲ ಪದಾರ್ಥಗಳಲ್ಲಿ ಆಸಕ್ತ ಹಾಗೂ ವಿಷಯಸುಖನಿರತನಾಗಿ, ಜೀವಿಸಿ, ಜಯಶಾಲಿಯಾಗಿ ಮೆರೆಯುವನು. ಗಡ್ಡದ (ಚಿಬುಕದ) ಮೇಲೆ ಮಚ್ಚೆಯಿರುವುದರಿಂದ ಪುರುಷನು ಅಭ್ಯುದಯಸಂಪನ್ನನಾಗಿ ಗಣ್ಯತೆಹೊಂದುವನು.

ಕೊರಳಿನ ಪಕ್ಕದಲ್ಲಿ ಮಚ್ಚೆಯಿರುವುದರಿಂದ ಅತ್ಯಂತ ಶಾರೀರಿಕ ಅಥವಾ ಆರ್ಥಿಕ ಸಂಕಷ್ಟಗಳಿಂದ ವಿಮೋಚನೆಹೊಂದಿದ ನಂತರ, ಅನಿರೀಕ್ಷಿತ ಧನ ಲಾಭ ಹಾಗೂ ಭೂಮಿ ಲಾಭದಿಂದ ಸ್ಥಾನಮಾನ ಗಳಿಸಿ ಮೆರೆಯುವನು. ಕೊರಳಿನ ಮೇಲೆ ಹಾಗೂ ಮಧ್ಯಭಾಗದಲ್ಲಿ ಮಚ್ಚೆಯಿದ್ದರೆ ವಿವಾಹದಿಂದ ಧನಿಕನಾಗುವನು.

ಬಲ ಮೊಲೆಯ ಮೇಲೆ ಮಚ್ಚೆಯಿದ್ದರೆ, ತಟಕ್ಕನೆ ವಿಪತ್ತಿಗಳಿಗೆ ಒಳಗಾಗಿ, ಸುಖ ಸೌಕರ್ಯಗಳನ್ನು ಕಳಕೊಂಡು ದುಃಖ ಸಂಕಷ್ಟಗಳನ್ನು ಅನುಭವಿಸುವನು; ಹಾಗೂ ಅನಿರೀಕ್ಷಿತ ಆಘಾತ ಪ್ರತ್ಯಾಘಾತಗಳಿಗೆ ಅಧೀನನಾಗುವನು. ಬಹುಕನ್ಯೆಯರ ಪಿತನಾಗುವನು.

ಎಡ ಮೊಲೆಯ ಮೇಲಿರುವ ಮಚ್ಚೆಯು ಕಾರ್ಯಗಳಲ್ಲಿ ಜಯ ಮತ್ತು ಸುಂದರ ಸ್ವಭಾವವನ್ನು ಸೂಚಿಸುತ್ತದೆ.

ಎದೆಯ ಮೇಲೆ ಚಕ್ರಾಕಾರದ ಹಾಗೂ ಚಿಕ್ಕದಾದ ಮಚ್ಚೆಯು ಮಧ್ಯಮ ಆರೋಗ್ಯ ಹಾಗೂ ಮಧ್ಯಮ ಭಾಗ್ಯಸೂಚಕವಾಗಿದೆ.

ಎಡ ಮೊಲೆಯ ಕೆಳಗೆ ಹಾಗೂ ಹೃದಯದ ಮೇಲೆ ಮಚ್ಚೆಯಿದ್ದರೆ ಪುರುಷನು ಪ್ರೇಮದ ಸ್ವಭಾವ, ಚಂಚಲಚಿತ್ತ, ಪ್ರಯಾಣ ಪ್ರೇಮ ಹಾಗೂ ನಡತೆಯಲ್ಲಿ ತೇಜಸ್ಸು ಉಳ್ಳವನಾಗುತ್ತಾನೆ.

ಪಕ್ಕೆಲುಬುಗಳ ಬಲಭಾಗದಲ್ಲಿ ಒಂದು ಅಥವಾ ಹೆಚ್ಚು ಮಚ್ಚೆಗಳಿದ್ದರೆ ಪುರುಷನು ಸೋಮಾರಿಯಾಗಿ ಸೂಕ್ಷ್ಮವಿಚಾರ ಗ್ರಹಣದಲ್ಲಿ ದಡ್ಡನಾಗಿ ಸಂಕಷ್ಟಗಳನ್ನು ಅನುಭವಿಸಬೇಕಾಗುವುದು.

ನಡು ಹೊಟ್ಟೆಯ ಮೇಲೆ ಮಚ್ಚೆ ಅಥವಾ ಅನ್ಯತಿಲಕವಿದ್ದರೆ ಪುರುಷನು ಸಾಹಸಿಯಾಗದೆ, ಅತ್ಯಧಿಕ ಆಹಾರ ತಿನ್ನುವವನಾಗಿ, ಸಕಲ ಕಾರ್ಯಗಳಲ್ಲಿಯೂ ಅತ್ಯಂತ ಸ್ವಾರ್ಥಿಯಾಗಿ ವರ್ತಿಸುವನು. ಪರರಿಗೆ ಒಳ್ಳೆಯದನ್ನು ಮಾಡದೆ ಹಾಗೂ ಸುಂದರ ವಸ್ತ್ರಾಲಂಕಾರಗಳನ್ನು ಕಾಯಂ ಉಪಯೋಗಿಸದೆ ಬದುಕುವನು.

ಬಲತೊಡೆಯ ಮೇಲೆ ಮಚ್ಚೆಯಿದರೆ, ಸೈನ್ಯ ದೃಷ್ಟಿಯಿಂದ ಬಹು ಕೀರ್ತಿಹೊಂದಿ ಸೌಭಾಗ್ಯಶಾಲಿ ಹಾಗೂ ಧನಿಕನೂ ಆಗುವನು; ಅರಸರ ಹಾಗೂ ಶ್ರೀಮಂತರ ಸಮಕ್ಷಮದಲ್ಲಿ ಓರ್ವ ಶ್ರೇಷ್ಠ ಕನ್ಯೆಯನ್ನು ವರಿಸುವನು.

ಎಡ ತೊಡೆಯ ಮೇಲಿರುವ ಮಚ್ಚೆ ಬಡತನದಲ್ಲಿ ಬಳಲಿ ಬೆಂಡಾಗಿ ಮಿತ್ರರಿಲ್ಲದೆ ಶತ್ರುಗಳ ಅನ್ಯಾಯ ಹಾಗೂ ಶತ್ರುತ್ವದಿಂದ ಪೀಡಿತನಾಗಿರುವ ಪುರುಷನೆಂದು ಸೂಚಿಸುತ್ತದೆ.

ಬಲ ಮೊಣಕಾಲಿನ ಮೇಲೆ ಮಚ್ಚೆ ಇರುವುದರಿಂದ ಮನಸ್ಸಿಗೆ ಸಂಪೂರ್ಣ ಒಪ್ಪುವ ಸ್ತ್ರೀಯನ್ನು ಮದುವೆಯಾಗುವನು; ಇಡೀ ಜೀವಮಾನದಲ್ಲಿ ನಿರಾಶೆಯು ಬರದು.

ಎಡ ಮೊಣಕಾಲಿನ ಮೇಲೆ ಮಚ್ಚೆಯಿದ್ದರೆ, ಪುರುಷನು ದುಡುಕಿನವ, ವಿವೇಕ ಶೂನ್ಯ ಹಾಗೂ ಮುಂಗೋಪಿಯಾಗುವನು; ಆದರೆ ಶಾಂತಚಿತನಾಗಿ ವಿನಯಯುಕ್ತ, ಪ್ರಾಮಾಣಿಕ, ಹಾಗೂ ಸದ್ವರ್ತನೆಯುವನಾಗುವನು.

ಯಾವದೇ ಹರಡು ಅಥವಾ ಗುಲ್ಬದ ಮೇಲೆ ಮುಂಭಾಗದಿಂದ ಮಚ್ಚೆಯಿದ್ದರೆ, ವಿವೇಕಶೂನ್ಯ ಹಾಗೂ ಭವಿಷ್ಯದ ಕುರಿತು ಉದಾಸೀನನಾಗುವನು.

ಯಾವದೇ ಹರಡಿನ ಹಿಂಭಾಗದಲ್ಲಿ ಮಚ್ಚೆಯಿದ್ದರೆ, ಪುರುಷನು ಸ್ತ್ರೀ ಸ್ವಭಾವದವ ಹಾಗೂ ವಿಸ್ತೃಪ್ತಿಯ ಮತ್ತು ಸರಳ ಆಹಾರದವನಾಗುತ್ತಾನೆ.

ಯಾವದೇ ಪಾದದ ಮೇಲೆ ಮಚ್ಚೆಯಿದ್ದರೆ, ವಿವೇಕಿ ಮತ್ತು ಪ್ರಾಜ್ಞನಾಗುವನು; ದೂರದರ್ಶಿ ಹಾಗೂ ಗೌಪ್ಯದವನು.

ಬಲ ಭುಜದ ಮೇಲೆ ಮಚ್ಚೆಯಿದ್ದರೆ ವಿವೇಕಿ ಮತ್ತು ಪ್ರಾಜ್ಞನಾಗುವನು; ದೂರದರ್ಶಿ ಹಾಗೂ ಗೌಪ್ಯದವನು.

ಎಡ ಭುಜದ ಮೇಲೆ ಮಚ್ಚೆಯಿದ್ದರೆ, ಜಗಳಗಂಟ ಹಾಗೂ ಅನ್ಯರ ಅಂಕೆಯಲ್ಲಿರದವನಾಗುತ್ತಾನೆ.

ಬಲ ತೋಳಿನ ಮೇಲೆ ಮಚ್ಚೆಯಿದ್ದರೆ ಉತ್ಸಾಹೀ ಧೈರ್ಯಶಾಲಿ ಹಾಗೂ ನಿರ್ಭೀತ ಪುರುಷನು.

ಎಡ ತೋಳಿನ ಮೇಲೆ ಮಚ್ಚೆಯಿದ್ದರೆ ಸ್ಥಿರ ಮನಸ್ಕ ಹಾಗೂ ಯುದ್ಧದಲ್ಲಿ ಜಯಶಾಲಿಯಾಗುವನು.

ಯಾವದೇ ಮೊಣಕೈ ಮೇಲಿದ್ದರೆ, ಶಾಂತಿರಹಿತ, ಚಂಚಲ, ಶೀಘ್ರ ಕೋಪಿ ಹಾಗೂ ಸ್ವಜನರಿಂದ ಅಸಂತುಷ್ಟನಾಗುವನು.

ಮೊಣಕೈ ಮತ್ತು ಮಣಿಕಟ್ಟಿನ ಮಧ್ಯದಲ್ಲಿ ಮಚ್ಚೆಯಿದ್ದರೆ, ಅನೇಕ ಸಂಕಷ್ಟಗಳು ಅನುಭವಿಸಿದ ನಂತರವೇ ಧನಿಕ ಹಾಗೂ ಕೀರ್ತಿವಂತನಾಗುವನು.

ಮಣಿಕಟ್ಟಿನ ಮೇಲೆ ಅಥವಾ ಮಣಿಕಟ್ಟು ಮತ್ತು ಕೈಬೆರಳುಗಳ ತುದಿಗಳ ನಡುವೆ ಮಚ್ಚೆಯಿದ್ದರೆ, ಚತುರ ವಿಶ್ವಾಸಪಾತ್ರ ಹಾಗೂ ಶ್ರದ್ಧಾವಂತನಾಗುವನು; ಅಂಥವನು ಮಿತ್ರರನ್ನು ಅತ್ಯಂತವಾಗಿ ಪ್ರೀತಿಸುವನು.

ಭುಜದಿಂದ ಸೊಂಟದ ವರೆಗೆ ನೇರವಾಗಿ ಮಚ್ಚೆಯಿದ್ದರೆ ಅತ್ಯಂತ ಹಾಸ್ಯಕಾರಕ ಹಾಗೂ ತುಂಟನಾಗುವನು.

ಹೊಟ್ಟೆಯ ಮೇಲೆ ಮಚ್ಚೆಯಿದ್ದರೆ ಬಹಳ ಹೆಚ್ಚು ಆಹಾರ ತಿನ್ನುವವನು. ಹೊಟ್ಟೆಯ ಕೆಳಭಾಗದಲ್ಲಿ ಮಚ್ಚೆಯಿದ್ದರೆ, ದುರ್ಬಲ ಹಾಗೂ ದೋಷಯುಕ್ತನಾಗುವನು.

ಮುಂಡಿಯ ಮೇಲೆ ಮಚ್ಚೆಯಿದ್ದರೆ ಧನಸಂಪನ್ನಸ್ತ್ರೀಯನ್ನು ಮದುವೆಯಾಗುವನು.

ಮೂಗಿನ ಮೇಲೆ ಮಚ್ಚೆಯಿದ್ದರೆ, ಸದಾ ಭೂಸಂಚಾರಮಾಡುವನು. ಗಂಟಲಿನ ಮೇಲ್ಭಾಗದಲ್ಲಿರುವ ಮಚ್ಚೆಯಿದ್ದರೆ ಧನಿಕನಾಗುವನು.

ಹಣೆಯ ಮಧ್ಯಭಾಗದಲ್ಲಿ ಅಥವಾ ತಲೆಕೂದಲಿನ ಹತ್ತಿರ ಹಣೆಯ ಮಧ್ಯದಲ್ಲಿ ಮಚ್ಚೆಯಿದ್ದರೆ, ಪುರುಷನು ಅನ್ಯರೊಡನೆ ಶತ್ರುತ್ವ ಕಟ್ಟಿಕೊಂಡು, ಕ್ರೂರ ಹಾಗೂ ಕಠೋರ ವಾಕ್‌ಸಂಪತ್ತಿನವನಾಗುವನು. ಮಚ್ಚೆಯು ಕೆಂಪಗಿದ್ದರೆ, ಅವನು ಲೋಕಪ್ರಿಯನಾಗುವನು! ಕುಂಕುಮ ಬಣ್ಣದ್ದಾದರೆ, ಉಗ್ರ ಹಾಗೂ ಪ್ರಚಂಡ ಸ್ವಭಾವದವನಾಗುತ್ತಾನೆ; ಕರ್ರಗಿದ್ದರೆ ನಿಷ್ಪ್ರಯೋಜಕ ಹಾಗೂ ಪ್ರಮಾಣರಹಿತನಾಗುವನು; ನರೋಲಿಯಂತೆ ಮಚ್ಚೆ ಕಾಣಿಸಿದರೆ, ಸೌಭಾಗ್ಯಶಾಲಿಯಾಗುವನು.

ಹಣೆಯ ಮಧ್ಯದಲ್ಲಿದ್ದು ಸ್ವಲ್ಪ ಬಲಭಾಗದಲ್ಲಿ ಮಚ್ಚೆಯಿದ್ದರೆ, ಶ್ರೀಮಂತರ ಹಾಗೂ ಧನಿಕರ ಗೆಳೆತನದಿಂದ ಲಾಭಹೊಂದಿ, ಜೀವಿಸಿ, ಮೆರೆಯುವನು; ಶಾಸನೀಯ ಮುಖವೈಖರಿಯುಳ್ಳವನು, ಅತ್ಯಂತ ಗಣ್ಯತೆಪಡೆದವನು, ಹಾಗೂ ಲೋಕಕಲ್ಯಾಣ ಮಾಡಿ ಪೂಜಿಸಲ್ಪಡುವನು; ಕರ್ರಗಿದ್ದರೆ ಮಹಾಪುರುಷರ ಅಸಂತೋಷಕ್ಕೆ ಒಳಗಾಗಿ ದುಃಖಿತನಾಗುವನು. ನರೋಲಿಯಂತಿದ್ದರೆ, ಸೌಭಾಗ್ಯವರ್ಧಕವಾಗಿದೆ.

ಹಣೆಯ ಎಡಭಾಗದಲ್ಲಿ ಹಾಗೂ ಕೂದಲಿನ ಹತ್ತಿರ ಮಚ್ಚೆಯಿದ್ದರೆ, ದುಃಖ ಮತ್ತು ಸಂಕಷ್ಟಸಮುದಾಯಗಳು ಸ್ತ್ರೀಯ ದುರ್ವರ್ತನೆಯಿಂದ ಬಂದೊದಗಿ, ಪೀಡಿಸುವವು; ಕೆಂಪಗಿದ್ದರೆ ಮಚ್ಚೆಯು ದುಃಖವಿಮೋಚನೆ ಮಾಡುವುದು. ಕರ್ರಗಿದ್ದರೆ ಹಾಗೂ ಸ್ವಲ್ಪ ಎದ್ದು ಕಾಣಿಸಿದರೆ, ಪ್ರತಿಯೊಂದು ಕಾರ್ಯದಲ್ಲಿ ಅಪಜಯಹೊಂದಿ, ದುಃಖಿತನಾಗುವನು.

ಹಣೆಯ ನಡುವೆ, ಸ್ವಲ್ಪ ಎಡಕ್ಕೆ ಮಚ್ಚೆಯಿದ್ದರೆ, ಮೇಲಾಧಿಕಾರಿಗಳಿಂದ ಪೀಡಿತನಾಗಿ, ಫೌಜುದಾರಿ ಫಿರ್ಯಾದಿಗೆ ಒಳಗಾಗಿ, ತಪ್ಪಿತಸ್ಥನಾಗಿ, ಬಂಧಿತನಾಗುವನು; ಜೇನಿನ ವರ್ಣವಾದರೆ, ಪಿತ್ರಾರ್ಜಿತ ಸೊತ್ತನೆಲ್ಲಾ ಹಾಗೂ ಸಕಲ ಸಂಪತ್ತಿಯನ್ನು ದುಂದುಗಾರಿಕೆಯಿಂದ ಹಾಳುಮಾಡುವನು; ಕುಂಕುಮ ಬಣ್ಣದಿದ್ದರೆ ದರಿದ್ರನಾಗುವನು; ಕರ್ರಗಿದ್ದರೆ, ಮಹಾಪುರುಷರ ದ್ವೇಷ ಹಾಗೂ ಕೋಪಕ್ಕೆ ಒಳಗಾಗಿ ದುಃಖಿತನಾಗುವನು.

ಎಡ ಕಣ್ತಲೆ(ಗಂಡಸ್ಥಳ)ಯ ಮೇಲೆ ಮಚ್ಚೆಯಿದ್ದರೆ, ಹಾಸ್ಯರಸಪ್ರಧಾನ ಹಾಗೂ ಬುದ್ಧಿಶಾಲಿಯಾಗುವನು; ಕರ್ರಗಿದ್ದರೆ, ಸುಳ್ಳುಗಾರನೆಂದು ಜನರಿಂದ ಕರೆಯಲ್ಪಡುವನು; ನರೋಲಿಯಂತಿದ್ದರೆ, ಭಾಗ್ಯದುರ್ಬಲವಾಗುವುದು; ಬಲ ಕಣ್ತಲೆಯ ಮೇಲೆ ಮಚ್ಚೆಯಿದ್ದರೆ ಹಾಗೂ ತಲೆಯ ಬದಿಯಲ್ಲಿದ್ದರೆ ದೀರ್ಘಾಯುಷ್ಯ ಹಾಗೂ ಸೌಭಾಗ್ಯವು ಒದಗುವುದು; ಕಂದು ಅಥವಾ ಕೆಂಪು ಬಣ್ಣದಾದರೆ ಕಾರ್ಯಸಾಧಕನಾಗುವನು.

ಬಲ ಕಣ್ತಲೆಯ ಮೇಲೆ ಕುತ್ತಿಗೆಯ ಕಡೆಗೆ ಬಗ್ಗಿಕೊಂಡಿದ್ದ ಮಚ್ಚೆಯು ಅದ್ವಿತೀಯ ಪ್ರತಿಭೆ, ಅತ್ಯಧಿಕ ಧನ ಹಾಗೂ ದೀರ್ಘಾಯುಷ್ಯವುಳ್ಳವನನ್ನು ಸೂಚಿಸುತ್ತದೆ. ಮಚ್ಚೆಯು ಜೇನು ಅಥವಾ ಕೆಂಬಣ್ಣದ್ದಾದರೆ, ಅತ್ಯಂತ ಭಾಗ್ಯಶಾಲಿಯಾಗುವನು; ಮಚ್ಚೆಯು ಕರ್ರಗಿದ್ದರೆ, ಅದು ಶಾಪತ್ರಯ ಸೂಚಕವಾಗಿದೆ; ನರೋಲಿಯಂತಿದ್ದ ಮಚ್ಚೆಯಿಂದ ಹೆಚ್ಚಿನ ವಿಷಯಸುಖ ಸೌಕರ್ಯ ಹಾಗೂ ಸೌಲಭ್ಯಗಳು ಲಭಿಸುವುವು.

ಎಡ ಬದಿಯ (ಕಣ್ತಲೆಯ) ಮಚ್ಚೆಯು ಕಣ್ಣಿಗಿಂತ ಸ್ವಲ್ಪ ಮೇಲ್ಭಾಗದಲ್ಲಿದ್ದರೆ ರೋಗಪೀಡಿತನಾಗುವನು; ಅದು ಕರ್ರಗಿದ್ದರೆ ಅಲ್ಪಾಯುರ್ದಾಯವು ಸೂಚಿತವಾಗಿದೆ; ನರೋಲಿಯಂತಿದ್ದರೆ, ಅತ್ಯಂತ ಸುಖಮಯವಾಗಿದೆ.

ತುಟಿಯ ಮೇಲೆ ಯಾವದೇ ಭಾಗದಲ್ಲಿ ಮಚ್ಚೆಯಿದ್ದರೆ, ಬಕಾಸುರನಂತೆ ತಿಂದು ಮೆರೆಯುವನು; ಲೋಕಪ್ರಿಯ ಹಾಗೂ ಜನಪ್ರೀತನಾಗುವನು.

ಚಿಬುಕದ ಮೇಲೆ ಮಚ್ಚೆಯಿದ್ದರೆ, ಅತ್ಯಂತ ಧನಿಕನಾಗುವನು. ಯಾವದೇ ಕಿವಿಯ ಮೇಲೆ ಮಚ್ಚೆಯಿರುವುದರಿಂದ ಧನಿಕ ಹಾಗೂ ಮಾನವಂತನಾಗುವನು.

ಕುತ್ತಿಗೆಯ ಮೇಲೆ ಮಚ್ಚೆಯಿದ್ದರೆ ಧನಿಕನಾಗುವನು; ಅಂಥವನ ಪತ್ನಿಯು ಸಚ್ಚರಿತ್ರಳು; ಕೊರಳಿನ ಮೇಲೆ ಮಚ್ಚೆಯಿದ್ದರೆ, ಧನಸಂಪನ್ನ ಹಾಗೂ ಸಂಭ್ರಮದ ವಿವಾಹವಾಗುವವನು.

ಯಾವುದೇ ಅಂಗೈಯ ಮೇಲೆ ಮಚ್ಚೆ ಇದ್ದರೆ, ಅತ್ಯಂತ ಅಭ್ಯುದಯ ಹಾಗೂ ರೋಗರಹಿತ ಪುತ್ರಪುತ್ರಿಯರು ಇರುವರು.

ಬಲ ಮೊಲೆಯ ಮೇಲೆ ಮಚ್ಚೆಯಿರುವುದರಿಂದ ಬಡತನ; ಎಡ ಮೊಲೆಯ ಮೇಲಿದ್ದರೆ, ಸೌಭಾಗ್ಯ ಹಾಗೂ ಶ್ರೀಮಂತಿಕೆ. ಉದರದ ಎಡ ಭಾಗದಲ್ಲಿ ಮಚ್ಚೆಯಿದ್ದರೆ, ಪುರುಷನು ವಿಷಯಾಸಕ್ತ ಹಾಗೂ ವಿಲಾಸಿಯಾಗುವನು.

ಎಡ ಭುಜದ ಮೇಲೆ ಮಚ್ಚೆಯಿದ್ದರೆ (ತೋಳಿನ ಹತ್ತಿರ) ಜಗಳಗಂಟನಾಗುವನು. ಬಲಕಿವಿಯ ಕೆಳಭಾಗದ ಮೇಲೆ ಮಚ್ಚೆಯಿದ್ದರೆ, ಮುಳುಗಿ ಸಾಯುವನು.

ನಾಸಾ ರಂಧ್ರದ ಕೆಳಭಾಗದ ಮೇಲೆ ಮಚ್ಚೆಯಿದ್ದರೆ ವಿವಾಹವಾದ ನಂತರ ಭಾಗ್ಯಶಾಲಿ ಹಾಗೂ ಭಾಗ್ಯಸಂಪನ್ನನು.

ಉದರದ ಎಡ ಬದಿಯಲ್ಲಿ ಮಚ್ಚೆ ಇರುವುದರಿಂದ, ಸದಾ ದುಃಖಿತ ಹಾಗೂ ಪೀಡಿತನಾಗುವನು. ಬಲ ಪಾದದ ಮೇಲೆ ಮಚ್ಚೆಯಿದ್ದರೆ ಬುದ್ಧಿವಂತನು. ಎಡ ಪಾದದ ಮೇಲಿದ್ದರೆ ಅವಿಚಾರ ಕಾರ್ಯಗಳಿಂದ ಅಪಾಯ ಕಾರಕನಾಗುವನು.

ಯಾವುದೇ ಹುಬ್ಬಿನ ಮೇಲೆ ಮಚ್ಚೆಯಿದ್ದರೆ ತಟಕ್ಕನೆ ಮದುವೆಯಾಗಿ ಸುಖೀ ದಾಂಪತ್ಯ ನಡಿಸುವನು. ಎಡ ಕಂಕುಳಲ್ಲಿ ಮಚ್ಚೆ ಇದ್ದರೆ ಅಕಾಲ ಮರಣವಶನಾಗುವನು. ಬಲ ಕಂಕುಳಲ್ಲಿ ಮಚ್ಚೆಯಿದ್ದರೆ ಸುಖದ ಜೀವಮಾನ.

ಕೊರಳಿನ ಎರಡು ಬದಿಗಳಲ್ಲಿಯೂ ಮಚ್ಚೆಗಳಿದ್ದರೆ, ಅಕಾಲ ಮರಣ ಹಾಗೂ ಅನೇಕ ಆಕಸ್ಮಿಕ ಅಪಾಯಗಳು ಸಂಭವಿಸುವುವು.

ಎದೆಯ ಅಥವಾ ಮೊಲೆಯ ಸರೀ ಮಧ್ಯಭಾಗದಲ್ಲಿ ಮಚ್ಚೆಯಿದ್ದರೆ, ಹಾಗೂ ಅದರ ಮೇಲೆ ಒಂದು ಕಪ್ಪು ಕೂದಲು ಇದ್ದರೆ ಮಹಾಕವಿಯಾಗುವನು.

ಬಲ ಕಣ್ಣಿನ ಕೆಳಗೆ ಹಾಗೂ ನಡುವೆ ಮಚ್ಚೆಯಿದ್ದರೆ, ಭೀಕರನಾದರೂ ಉಚ್ಚಶೀಲದವನು.

ಮಣಿಕಟ್ಟಿನ ಮೇಲೆ ಅಥವಾ ಮಣಿಕಟ್ಟಿನಿಂದ ಬೆರಳ ತುದಿಗಳ ತನಕ ಮಚ್ಚೆಯಿದ್ದರೆ ಪ್ರತಿಭಾಶಾಲಿ ಹಾಗೂ ಅತ್ಯಂತ ವಿದ್ಯಾಸಂಪನ್ನನಾಗುವನು.

ಮೊಣಕೈಯಿಂದ ಮಣಿಕಟ್ಟಿನ ಪರ್ಯಂತ ಹೆಚ್ಚು ಮಚ್ಚೆಗಳಿದ್ದರೆ, ಮಧ್ಯ ವಯೋಮಾನದಲ್ಲಿ ಹಲವು ತಾಪತ್ರಯಗಳಿಂದ ಬಳಲುವನು; ಅನಂತರ ಸುಖ ಹಾಗೂ ಧನ ಮತ್ತು ಭಾಗ್ಯವಂತನಾಗುವನು.

ಚಿಬುಕದ (ಕದಪಿನ) ಬದಿಯಲ್ಲಿ ಮಚ್ಚೆಯಿದ್ದರೆ, ಸೌಜನ್ಯ, ಪರಮೋತ್ಸಾಹ ಹಾಗೂ ಜೀವಮಾನದಲ್ಲಿ ಜಯಶಾಲಿಯಾಗಿ ಮಿತ್ರಯುಕ್ತನಾಗಿ ಮೆರೆಯುವನು.

[2ನೇ ಪುಟದಿಂದ ಮುಂದುವರಿದುದು.]

೩೨.	ಮರ್ಜಿ [ಏಕಾಂಕ ಪ್ರಹಸನ]	ಡಿ| ಎಂ. ಎನ್. ಕಾಮತ್.
೩೩.	ದರ್ಶನದ ಕಥೆಗಳು	ಶ್ರೀ| ಬಿ. ಶಂಕರ ಭಟ್ಟ ಮತ್ತು ಶ್ರೀ| ಬಿ. ಎಂ. ಶರ್ಮಾ.
೩೪.	ಅಳುವಿನ ಹೊಳೆ ಮತ್ತು ಕೇಶವಭೂಪ [ಮಕ್ಕಳ ಕಥೆಗಳು]	"ನವಗಿರಿನಂದ."
೩೫.	ಶರಾಬಿನ ಸಿಪಾಯಿಗಳು	ಶ್ರೀ| ಬಳ್ಳೂರು ಸುಬ್ರಾಯ ಅಡಿಗ.
೩೬.	ಗುಮಾನಿಕವಿಯ ಉಪದೇಶ ಶತಕ	ಶ್ರೀ| ಅಮ್ಮೆಂಬಳ ಅನಂತಯ್ಯ ಸಾವಡ.
೩೭.	ನಿಮಗೆ ಗೊತ್ತಿದೆಯೇ? (ದ್ವಿತೀಯ ಮುದ್ರಣ)	ಶ್ರೀ| ಟಿ. ಚಂದ್ರರಾಜ ಸೆಟ್ಟಿ.
೩೮.	ಚತುರ ಚಮತ್ಕಾರ	ಡಾ| ಎಸ್. ಪಿ. ಭಟ್.
೩೯.	ಸತೀ ಸಾವಿತ್ರಿ [ಏಕಾಂಕ ನಾಟಕ]	ಶ್ರೀ| ಪಿ. ವೆಂಕಟರಮಣ ಭಟ್ಟ.
೪೦.	ಆಭರಣಗಳ ಪೆಟ್ಟಿಗೆ ಮತ್ತು ಇತರ ಕಥೆಗಳು.	ಶ್ರೀ| ಬಳ್ಳೂರು ಸುಬ್ರಾಯ ಅಡಿಗ.
೪೧.	ಭಾರತದ ಮಂತ್ರಿಮಂಡಲಗಳು. (ತೃತೀಯ ಮುದ್ರಣ.)	
೪೨.	ಕಾಲುಬಳೆಯ ಕತೆ	ಶ್ರೀಮತಿ ಬಿ. ಎಸ್. ರತ್ನಮ್ಮ.
೪೩.	ಭಾರತದ ನಾಲ್ಕು ಕಲಶಗಳು (ದ್ವಿ. ಮುದ್ರಣ)	ಶ್ರೀ| ಟಿ. ಚಂದ್ರರಾಜ ಸೆಟ್ಟಿ.
೪೪.	ವ್ಯಸನದಿಂದ ಲಾಭ ಮತ್ತು ಇತರ ಕಥೆಗಳು	ಶ್ರೀ| ಎಲ್. ಎಸ್. ನಾಯಕ.
೪೫.	ಸುಭಾಷಿತ (ನೀತಿವಚನಗಳು) [ದ್ವಿ. ಮು.]	ಶ್ರೀ| ಎಂ. ಸುಬ್ರಾಯನ್, ವಿದ್ವಾನ್.
೪೬.	೧೮೫೭ರ "ಸಿಪಾಯಿದಂಗೆ"	ಶ್ರೀ| ಸುಭಾಷ್ಚಂದ್ರ ಶೆಣೈ, ಬದಿಯಡ್ಕ.
೪೭.	ಅಕಾಂಡತಾಂಡವ (ರೇಡಿಯೋ ನಾಟಕ)	ಶ್ರೀ| ಕೆ. ದಾಮೋದರ ಬಾಳಿಗ, ಬಿ.ಎ.
೪೮.	ಸಾಹಸದ ಕಥೆಗಳು	ಶ್ರೀ| ಕುಡ್ಪಿ ವಾಸುದೇವ ಶೆಣೈ.
೪೯.	ಸಂಜ್ಞಾ ಜ್ಞಾನಕೋಶ (ಪ್ರಥಮ ಭಾಗ)	ಡಾ| ಎಸ್. ಪಿ. ಭಟ್.
೫೦.	ಪಂಡಿತನ ಪಿಟೀಲು	ಶ್ರೀ| ಕುಡ್ಪಿ ವಾಸುದೇವ ಶೆಣೈ.
೫೧.	ಭೋಗಯಾತ್ರೆ (ಆಚಾರ್ಯ ವಿನೋಬಾಭಾವೆ)	ಶ್ರೀ| ಎಲ್. ಎಸ್. ನಾಯಕ.

೫೨. ಸಂಗ್ರಾಮಸಿಂಹ (ಐತಿಹಾಸಿಕ ಕಥನ) ಶ್ರೀ। ಅ. ಗೌ. ಕಿನ್ನಿಗೋಳಿ ವಿದ್ವಾನ್.
೫೩. ಧರ್ಮ ಶಿಕ್ಷಾ ಶ್ರೀ। ಕೋ. ಶ. ಕಾಕಂತ, ಬಿ.ಎ., ಬಿ.ಎಲ್., ಎಡ್ವೊಕೇಟ್.
೫೪. ಮಹಾತ್ಮ (ಪೂಜ್ಯ ಬಾಪೂಜಿ) ಶ್ರೀ। ಎಲ್. ಎಸ್. ನಾಯಕ್.
೫೫. ಮೀರಾಬಾಯಿ (ಏಕಾಂಕ ನಾಟಕ) ಶ್ರೀ। ಸಂ. ಜ. ರಾವ್.
೫೬. ವೀರರಮಣಿ ಕರ್ಮದೇವಿ ಶ್ರೀ। ಕೆ. ಎಸ್. ಶರ್ಮಾ, ವಿದ್ವಾನ್.
೫೭. ಅರಳಿದ ನಗು ಶ್ರೀ। ಬಳ್ಕೂರು ಸುಬ್ರಾಯ ಅಡಿಗ, ವಿದ್ವಾನ್.
೫೮. ಸಚಿತ್ರ ಜಪಾನ್ ಶ್ರೀ। ಟಿ. ಕಮೇಶ ಪೈ.
೫೯. ಚುಟ್ಟಬಿಟ್ಟದಿಟ್ಟ (ಏಕಾಂಕ ಪ್ರಹಸನ) ಡಾ। ಎಸ್. ಪಿ. ಭಟ್.
೬೦. ನಿರಪರಾಧಿ ಶ್ರೀ। ಎಚ್. ಎಸ್. ನಾಯಕ್.
೬೧. ಭಕ್ತವಾಣಿ ರಾಷ್ಟ್ರಕವಿ ಮಂಜೇಶ್ವರ ಗೋವಿಂದ ಪೈ.
೬೨. ಜಾನಪದ ಸಾಹಿತ್ಯ ಶ್ರೀ। ಪಡಾರು ಮಹಾಬಲೇಶ್ವರ ಭಟ್.
೬೩. ಡಾಕ್ಟರ್ ಆರೋಗ್ಯಮ್ ಶ್ರೀ। ಕೆ. ಎನ್. ಭಟ್, ಶಿರಾಡಿಪಾಲ್.
೬೪. ಲೌಕಿಕ ನ್ಯಾಯಗಳು ಶ್ರೀ। ಕೆ. ಎಲ್. ಎನ್. ಉಪಾಧ್ಯಾಯ.
೬೫. ಶಿಶುಪಾಲ ಮಾನಭಂಗ ಶ್ರೀ। ಕೆ. ಸುಭಾಷಚಂದ್ರ ಶೆಣೈ, ಬದಿಯಡ್ಕ.
೬೬. ಜರಾಸಂಧ ವಧೆ (ಏಕಾಂಕ) ಶ್ರೀ। ಎ. ವಿ. ಮಯ್ಯ, ಬಂಟ್ವಾಳ.
೬೭. ಪ್ರಧಾನಾಮಾತ್ಯ ಪಂಡಿತ ಜವಾಹರಲಾಲ ನೆಹರು ಶ್ರೀ। ಕುಡ್ಪಿ ವಾಸುದೇವ ಶೆಣೈ.
೬೮. ಕರುಣೆ ಮತ್ತು ಇತರ ಕಥೆಗಳು ಶ್ರೀ। ಬಳ್ಕೂರು ಸುಬ್ರಾಯ ಅಡಿಗ.
೬೯. ಶ್ರೀಕ್ಷೇತ್ರ ಉಡುಪಿ [ದ್ವಿ.ಮು.] ಶ್ರೀ। ಕೆ. ಪ್ರಭಾಕರ ರಾವ್.
೭೦. ವಿನೋದ ವಿಹಾರ —(ಆರಿಸಿ ತೆಗೆದ ನಗೆಹನಿಗಳು)
೭೧. ಭಾರತದ ಗತವೈಭವ ಶ್ರೀ। ಟಿ. ಚಂದ್ರರಾಜ ಸೆಟ್ಟಿ.
೭೨. ಸತ್ಯ ಹರಿಶ್ಚಂದ್ರ (ದ್ವಿತೀಯ ಮುದ್ರಣ) ಶ್ರೀ। ಪಿ. ವೆಂಕಟ್ರಮಣ ಭಟ್ಟ.
೭೩. ಸೂಕ್ತಿಗಳು ಶ್ರೀ। ಕೆ. ವೆಂಕಟರಾಯಾಚಾರ್ಯ.
೭೪. ಯಕ್ಷಗಾನ ಕಲಾವಿದರು (ನಟರ ಪರಿಚಯ) ಶ್ರೀ। ವಿಘ್ನೇಶ್ವರ ಶರ್ಮಾ ತದ್ದಲಸೆ.
೭೫. ದೇವರ ಸಾಮ್ರಾಜ್ಯದಲ್ಲಿ ಮತ್ತು ಇತರ ಕಥೆಗಳು ಶ್ರೀ। ಎಸ್. ಎನ್. ನವಕಾನ.
೭೬. ಕ್ರಾಂತಿಕಂಠೀರವ ಭಗತ್ ಸಿಂಘ ಶ್ರೀ। ಸತ್ಯಾಶ್ರಯ ಕಾಮತ್.
೭೭. ಜಾತಕಪಠನ ಮತ್ತು ಇತರ ಕಥೆಗಳು ಶ್ರೀ। ಕುಡ್ಪಿ ವಾಸುದೇವ ಶೆಣೈ.
೭೮. ಅಮೃತವಾಣಿ (ಲೋಕನಾಯಕರ ವಚನಗಳು) ಶ್ರೀ। ಎಮ್. ಶ್ರೀಧರ ಕಿಣಿ.
೭೯. ಮಾಯಾಮೃಗ (ಏಕಾಂಕ ನಾಟಕ) ಶ್ರೀ। ಎ. ವಿ. ಮಯ್ಯ.
೮೦. ಡಾಕ್ಟರ್ ಗಾಂಧೀಜಿ ಶ್ರೀ। ಮರಕ್ಕಿಣಿ ಶಂಕರನಾರಾಯಣ ಭಟ್.
೮೧. ಶ್ರೀಶಂಕರಾಚಾರ್ಯರ ಜೀವನಚರಿತ್ರೆ (ತೃ.ಮು.) ಡಾ। ಪಿ. ಎಸ್. ವಾಸುದೇವ ಶರ್ಮ.
೮೨. " ವಿರಚಿತ ಸ್ತೋತ್ರಗಳು " " "
೮೩. ಬೆಡಗಿನ ನಾಡು—ಕೊಡಗು: ಶ್ರೀ। ಶ್ರೀಪತಿರಾವ್ ಫಲಿಮಾರ್ಕರ್, ಬಿ.ಎ, ಬಿ.ಟಿ.
೮೪. ಆನೆಯ ಚಿಪ್ಪು ಮತ್ತು ಇತರ ಸತ್ಯಕಥೆಗಳು. ಶ್ರೀ। ಎಲ್. ಎಸ್. ನಾಯಕ್.
೮೫. ಮಂಗಳೂರಿಂದ ಮಧುರೆಗೆ ಶ್ರೀ। ಟಿ. ಚಂದ್ರರಾಜ ಸೆಟ್ಟಿ.
೮೬. ಸತೀ ವೃಂದಾ (ಏಕಾಂಕ ನಾಟಕ) ಶ್ರೀ। ಕೆ. ಸುಭಾಷ್ಚಂದ್ರ ಶೆಣೈ.

೮೭. ಗೌತಮನ ಗೃಹತ್ಯಾಗ ಮತ್ತು ಸಿದ್ಧಾರ್ಥನ ಕಾರುಣ್ಯ (ಎರಡು ಏಕಾಂಕಗಳು)
೮೮. ಗೃಹವೈದ್ಯ — ಶ್ರೀ। ಬಳ್ಳಾರು ಸುಬ್ರಾಯ ಅಡಿಗ.
೮೯. ನಮ್ಮ ನಾಟಕಗಳು — ಶ್ರೀ। ಎಂ. ಎಸ್. ಆಚಾರ್.
೯೦. ಜಾನಪದ ಕಥೆಗಳು — ಶ್ರೀ। ಕೆ. ವೆಂಕಟರಾಯಾಚಾರ್ಯ.
೯೧. ಕೆಲವು ಉಪಯುಕ್ತ ಸಲಹೆಗಳು — ಶ್ರೀ। ಬಳ್ಳಾರು ಸುಬ್ರಾಯ ಅಡಿಗ.
೯೨. ಅಭಿಜ್ಞಾನ ಶಾಕುಂತಲದಲ್ಲಿ ಲೋಕನೀತಿ — ಶ್ರೀ। ಕೆ.ಎಲ್.ಎನ್. ಉಪಾಧ್ಯಾಯ.
೯೩. ಹೋಮಿಯೋಪಥಿ ಚಿಕಿತ್ಸಾಸಾರ — ಶ್ರೀ। ಬೋಳೂರು ಎಸ್. ರಾವ್.
೯೪. ಯಕ್ಷಗಾನ ನಾಟಕದ ಪರಂಪರೆ ಮತ್ತು ಕೃತಿಗಳು — ಶ್ರೀ। ಮಂಜುನಾಥ ಭಾಗವತ.
೯೫. ಪುನರುಜ್ಜೀವನ (ಏಕಾಂಕ ನಾಟಕ) — ಶ್ರೀ। ಗೋವಿಂದ ಭಟ್ಟ, ಶೇಡಿಗುಮ್ಮೆ.
೯೬. ಪ್ರಥಮ ಚಿಕಿತ್ಸೆಯ ಕೈಪಿಡಿ — ಶ್ರೀ। ಬೋಳೂರು ಎಸ್. ರಾವ್.
೯೭. ಹಸ್ತರೇಖಾ ವಿಜ್ಞಾನ — ಡಾ। ಕೆ. ಕೆ. ಕಲ್ಲೂರ್.
೯೮. ಸ್ವಾತಂತ್ರ್ಯ (ಏಕಾಂಕ ನಾಟಕ) — ಶ್ರೀ। ಕೆ. ಎನ್. ಭಟ್, ಶಿರಾಡಿಪಾಲ್.
೯೯. ಭಾರತೀಯ ಸ್ವಾತಂತ್ರ್ಯಸಂಗ್ರಾಮ — ಶ್ರೀ। ಎಮ್. ರಘುನಂದನ ರಾವ್.
೧೦೦. ಭಕ್ತ ಕುಚೇಲ (ಏಕಾಂಕ ಸಂಗೀತ ನಾಟಕ) — ಶ್ರೀ। ಅಂಬಾತನಯ.
೧೦೧. ಉತ್ತರನ ಪೌರುಷ (ಯಕ್ಷಗಾನ) — ಶ್ರೀ। ಪುಟ್ಟಣ್ಣ.
೧೦೨. ಕುಮಾರ (ವಿನೋದ ಕಥೆ) — ಶ್ರೀ। ಕುಡ್ಪಿ ವಾಸುದೇವ ಶೆಣೈ.
೧೦೩. ಕೇರಳ ಜ್ಯೋತಿಷ (ಪ್ರಮುಖ ಯೋಗಗಳು) — ವೈದ್ಯಗುರು ಎಂ. ಆರ್. ಭಟ್.
೧೦೪. ಒಗಟುಗಳ ಗೊಂಚಲು (ಒಗಟುಗಳ ಭಾಗ ೩) — ಡಾ। ಎಸ್. ಪಿ. ಭಟ್.
೧೦೫. ಊರ–ಔಷಧಿಗಳು (ದ್ವಿ. ಮುದ್ರಣ) — ಶ್ರೀ। ಬೋಳೂರು ಎಸ್. ರಾವ್.
೧೦೬. ಮದ್ವೆ ಅವಾಂತರ (ಏಕಾಂಕ ಪ್ರಹಸನ) — "ಅಷ್ಟಾವಕ್ರ".
೧೦೭. ಜಗತ್ತಿನ ವಿಜ್ಞಾನಿಗಳು — ಶ್ರೀ। ಟಿ. ಚಂದ್ರರಾಜ ಸೆಟ್ಟಿ.
೧೦೮. ನಮ್ಮ ದೇಶ — ಶ್ರೀ। ಕುಡ್ಪಿ ವಾಸುದೇವ ಶೆಣೈ.
೧೦೯. ಗ್ರಾಮ ಸ್ವಾತಂತ್ರ್ಯ (ಏಕಾಂಕ) — ಶ್ರೀ। ಎ. ವಿ. ಮಯ್ಯ.
೧೧೦. ನಮ್ಮ ಕನ್ನಡ ನಾಡು — ಶ್ರೀ। ಕುಡ್ಪಿ ವಾಸುದೇವ ಶೆಣೈ.
೧೧೧. ಭಕ್ತ ಧ್ರುವ (ಏಕಾಂಕ ನಾಟಕ) — ಶ್ರೀ। ಸುಬ್ರಾಯ, ಅನಂತಪುರ.
೧೧೨. ಕರ್ಣಾಟಕ ಕವಿಚರಿತ್ರೆ — ಶ್ರೀ। ಬಿ. ಈಶ್ವರಯ್ಯ.
೧೧೩. ಬೇಡನ ಮಗಳು (ಏಕಾಂಕ ನಾಟಕ) — ಶ್ರೀ। ವೆಂಕಟರಾಜ ಪುಣಿಂಚತ್ತಾಯ.
೧೧೪. ಸ್ವಾಮಿ ವಿವೇಕಾನಂದ — ಶ್ರೀ। ಎಂ. ಕೃಷ್ಣರಾವ್, ಬಿ.ಎ.
೧೧೫. ನಮ್ಮ ಆಹಾರ — ಶ್ರೀ। ಕೆ. ಸಿ. ವೈದ್ಯರ್.
೧೧೬. ಗಾದೆಗಳೂ ಜ್ಞಾನೋಕ್ತಿಗಳೂ — ಶ್ರೀಮತಿ ಬೇಬಿ ಸರೋಜಿನಿ.
೧೧೭. ಪುರಂದರದಾಸರು [ಏಕಾಂಕ ನಾಟಕ] — ಶ್ರೀ। ಪದ್ಮನಾಭ ಸೋಮಯಾಜಿ.
೧೧೮. ಮನುಷ್ಯಯಜ್ಞ — ಶ್ರೀ। ಬಿ. ಶಂಕರ ಭಟ್ಟ.
೧೧೯. ಹೆಮ್ಮಕ್ಕಳ ಹಾಡುಗಳು — ಶ್ರೀ। ಪಡಾರು ಮಹಾಬಲೇಶ್ವರ ಭಟ್.
೧೨೦. ನಮ್ಮ ಹಬ್ಬಗಳು — ಶ್ರೀ। ಶ್ಯಾಮ್, ಪುತ್ತೂರು.
೧೨೧. ವೀರಾಗ್ರಣಿ ಕರ್ಣ (ಏಕಾಂಕ ನಾಟಕ) — ಶ್ರೀ। ಅಮ್ಮೆಂಬಳ ಅನಂತಯ್ಯ, ನಾವಡ.

೧೨೨. ಸೂರ್ಯನೇ ನನಗೆ ಸಾಕ್ಷಿ ಮತ್ತು ಇತರ ಕಥೆಗಳು ಶ್ರೀ। ಎನ್. ಎಸ್. ನವಕಾನ.
೧೨೩. ನವ ಕೈಲಾಸ (ಯಕ್ಷಗಾನ) ಶ್ರೀ। ಮಾಳಕೋಡ ನಾರಾಯಣ.
೧೨೪. ಕುಶ-ಲವ (ಏಕಾಂಕ ಪೌರಾಣಿಕ ನಾಟಕ) ಶ್ರೀ। ಬಿ. ಈಶ್ವರಯ್ಯ.
೧೨೫. ಅಮರನಾಥ ಯಾತ್ರೆ ಶ್ರೀ। ಗುಂಡ್ಮಿ ಮಹಾಬಲ ಭಟ್.
೧೨೬. ಸಂಜ್ಞಾ ಪ್ರಾಧ್ಯಾಪಕ ಮತ್ತು ಇತರ ಕಥೆಗಳು ಶ್ರೀ। ಎಂ. ಕೃಷ್ಣರಾವ್, ಬಿ.ಎ.
೧೨೭. ದ್ವಾರಕಾ ಶ್ರೀ। ಗುಂಡ್ಮಿ ಮಹಾಬಲ ಭಟ್.
೧೨೮. ಭಾರತದ ಸಂಗೀತ ಜ್ಯೋತಿಗಳು ಶ್ರೀ। ಎಚ್. ಸುಂದರರಾಮರಾವ್.
೧೨೯. ಮಕ್ಕಳ ಪದ್ಯಗಳು ಶ್ರೀ। ಅಮ್ಮೆಂಬಳ ಅನಂತಯ್ಯ ನಾವಡ, ವಿದ್ವಾನ್.
೧೩೦. ನಯಿ ಪೈಸೆ
೧೩೧. ತಾಯಿಗಾಗಿ ಮತ್ತು ಇತರ ಕಥೆಗಳು ಶ್ರೀ। ಬಿ. ಶಂಕರಭಟ್, ವಿದ್ವಾನ್.
೧೩೨. ಸಂತ ಮೀರಾಬಾಯಿಯ ಭಜನಾ ಗೀತಗಳು. ಶ್ರೀ। ಎಚ್. ಸುಂದರರಾಮರಾವ್.
೧೩೩. ಅಕ್ಷಯಪಾತ್ರೆ (ಏಕಾಂಕ) ಶ್ರೀ। ಟಿ. ಚಂದ್ರರಾಜ ಸೆಟ್ಟಿ, ಸಿದ್ಧಕಟ್ಟೆ.
೧೩೪. ಉ. ಕ. ದ ಯಕ್ಷಗಾನ ಮಂಡಲಿಗಳು ಶ್ರೀ। ಮಂಜುನಾಥ ಭಾಗವತ, ಕಡತೋಕ.
೧೩೫. ಅಕ್ಬರ-ಬೀರಬಲ ವಿನೋದ (ದ್ವಿ. ಮು.) ಶ್ರೀ। ಮಾಧವ ಭಟ್, ಮಡಿಕೇರಿ.
೧೩೬. ವೈರಾಗ್ಯಸಿಧಿ (ಏಕಾಂಕ) ಶ್ರೀ। ಕೆ. ಎಸ್. ಶರ್ಮಾ, ವಿದ್ವಾನ್.
೧೩೭. ಭರತನ ಬಂಧುಪ್ರೇಮ (ಏಕಾಂಕ) ಶ್ರೀ। ಅಮ್ಮೆಂಬಳ ಅನಂತಯ್ಯ ನಾವಡ,
೧೩೮. ದ್ವಾದಶ ಜ್ಯೋತಿರ್ಲಿಂಗಗಳು ಶ್ರೀ। ಗುಂಡ್ಮಿ ಮಹಾಬಲ ಭಟ್ಟ.
೧೩೯. ಪರೀಕ್ಷೆ ಮತ್ತು ಇತರ ಕಥೆಗಳು ಶ್ರೀ। ಎಂ. ಗೋಪಾಲ ಭಟ್.
೧೪೦. ಗಿಲ್ಟು ಮಾಡುವ ವಿಧಾನಗಳು ಶ್ರೀ। ಎಂ. ಶ್ರೀನಿವಾಸರಾವ್.
೧೪೧. ಕನ್ನಡ ಗಾದೆಗಳು ಶ್ರೀ। ಕುರಾಡಿ ಸೀತಾರಾಮ ಅಡಿಗ.
೧೪೨. ಮಹಾತ್ಮ ಉದಂಕ (ಏಕಾಂಕ ನಾಟಕ) ಪಣೆಲ “ಶಿವಶಂಕರ”
೧೪೩. ಭಕ್ತ ಪ್ರಹ್ಲಾದ (ಪೌರಾಣಿಕ ಏಕಾಂಕ ನಾಟಕ) ಶ್ರೀ। ಎ. ವಿ. ಮಯ್ಯ.
೧೪೪. ಧುಃಸಿರಾಣಿ ಗಂಗೆ ಶ್ರೀ। ಕೆ. ಸುಭಾಷ್ಚಂದ್ರ ಶೆಣೈ.
೧೪೫. ಸರ್ವಜ್ಞ ವಚನಗಳು [ಭಾಗ ೧] ಶ್ರೀ। ಕುಡ್ವಿ ವಾಸುದೇವ ಶೆಣೈ.
೧೪೬. ಅಭಿಮನ್ಯು ಅಥವಾ ಚಕ್ರವ್ಯೂಹ ಶ್ರೀ। ಬಿ. ಈಶ್ವರಯ್ಯ, ಪೆರ್ಲ.
೧೪೭. ಗಾನ ಕುಸುಮ (ಮಕ್ಕಳ ಹಾಡುಗಳು) ಶ್ರೀ। ಕೆ. ಎಸ್. ಪದ್ಮನಾಭ ಆಚಾರ್ಯ.
೧೪೮. ಚಾಣಕ್ಯ ಶತಕ—ಭಾಗ ೧ ಡಾ। ಟಿ. ಪಿ. ಭಟ್, ಮಂಗಳೂರು.
೧೪೯. ಚಾಣಕ್ಯ ಶತಕ—ಭಾಗ ೨ ,, ,,
೧೫೦. ವರಕವಿ ಮುದ್ದಣ ಶ್ರೀ। ಟಿ. ಚಂದ್ರರಾಜ ಸೆಟ್ಟಿ, ಸಿದ್ಧಕಟ್ಟೆ.
೧೫೧. ಲೋಕಮಾನ್ಯ ಬಾಲಗಂಗಾಧರ ತಿಲಕ ಶ್ರೀ। ಟಿ. ರಘುನಂದನರಾವ್.
೧೫೨. ಮಚ್ಚೆಗಳು: ಅದರ ಪರಿಣಾಮಗಳು ವೈದ್ಯಗುರು ಎಂ. ಆರ್. ಭಟ್.

ವಿಶೇಷ ಪ್ರಕಟಣೆ: ಮಕ್ಕಳ ಹಾಡುಗಳು (ದ್ವಿತೀಯ ಮುದ್ರಣ)

‡ ಈ ಗುರುತು ಹಾಕಿದ ಪುಸ್ತಕಗಳ ಪ್ರತಿಗಳು ಮುಗಿದಿವೆ.

ANNA PUBLICATIONS CAR STREET MANGALORE-1

Edited, Printed & Published by K. V. Shenoy
at the Prabhat Printers, Ltd., Mangalore.